Regd No. M 1293 ॥ सत्यान्नास्ति परो धर्मः ॥ ದಿಡಿ ಸಂಜಿಕ ಕ್ಕೆ

ಸತ್ಯವಾದಿ

ವರ್ಷಕ್ಕೆ ರೂ. 1—0—0 (ಮೈಸೂರು ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಪ್ರತಿಷ್ಠಿತವಾದುದು) ವರ್ಷಕ್ಕೆ ರೂ. 1—10—0
ಸ್ಥಳಕ್ಕೆ ಪ್ರತಿ ಬುಧವಾರ ಪ್ರಕಟಿಸಲ್ಪಡುವುದು ಪರಸ್ಥಳಕ್ಕೆ

ಸಂಪುಟ 19] ಮೈಸೂರು 2 ನೆ ಸೆಪ್ಟಂಬರ್ 1936 ಸಂಚಿಕೆ 50

ಮೈಸೂರು ಎಸ್. ಎನ್. ಪಂಡಿತರ

ಬಿಳೀಹಲ್ಲುಪುಡಿ! ಕರೀಹಲ್ಲುಪುಡಿ! ಮೈಸೂರು ಟೂತ್‌ಪೇಸ್!

ಬಿಳೀಹಲ್ಲುಪುಡಿ—ಇದರಲ್ಲಿ ಸಿಹಿ ಪುಡಿಯು ಸುವಾಸನೆ ಸುರುಚಿ ಇವುಗಳಿಂದ ಕೂಡಿ ಹಲ್ಲುಗಳನ್ನು ಶುಭ್ರವಾಗಿಡುತ್ತದೆ. ಉಪ್ಪಿನ ಪುಡಿಯು ರುಚಿಯಾಗಿಯೂ, ಆರೋಗ್ಯಕರವಾಗಿಯೂ ಇದೆ. ಪೊಟ್ಟಣ 1 ಕ್ಕೆ (ಸಿಹಿ, ಉಪ್ಪು) 9 ಪೈ; ಡಬ್ಬಿ 1 ಕ್ಕೆ (ಸಿಹಿ ಮತ್ತು ಉಪ್ಪು) 1 ಆಣೆ.

ಕರೀ ಹಲ್ಲುಪುಡಿ—ಇದನ್ನು ನಿತ್ಯವೂ ಉಪಯೋಗಿಸುವುದರಿಂದ, ಹಲ್ಲುಗಳ ಎಲ್ಲಾ ಕಾಯಿಲೆಗಳನ್ನೂ ಗುಣಮಾಡಿ ಪುನಃ ತೇಗಬಾರದಂತೆ ಅಡ್ಡಿಪಡಿಸುತ್ತದೆ. ಹಲ್ಲುಗಳ ಕೊಳೆಯನ್ನು ತೆಗೆದು ಬೆಳ್ಳಗೆ ಇಡುವುದರಲ್ಲಿ ಅದ್ವಿತೀಯವಾದ್ದು. ಟಿ 1 ಕ್ಕೆ 2 ಆಣೆ.

ಮೈಸೂರು ಟೂತ್‌ಪೇಸ್ಟ್—ಸೀಮೆಯಿಂದ ಬರುವ ಟೂತ್‌ಪೆಸ್ಟ್‌ಗಳಿಗಿಂತ ಗುಣ ಮುಂತಾದುವುಗಳಲ್ಲಿ ಕಡಮೆಯಾಗಿಲ್ಲ. ನಯ, ಹೊಳಪು, ಸುವಾಸನೆ, ರುಚಿ ಇವುಗಳಿಂದ ಕೂಡಿ ವಸಡುಗಳಿಗೆ ಬಲವನ್ನೂ, ಹಲ್ಲುಗಳಿಗೆ ಥಳಥಳ್ಳವನ್ನೂ ಉಂಟುಮಾಡುತ್ತದೆ. ಇದರ ಉಪಯೋಗದಿಂದ ಹಲ್ಲುಗಳನ್ನು ಹಾಳುಮಾಡತಕ್ಕ ಟಾರ್-ಟರ್ (ದಂತ ಶರ್ಕರ) ಅಂಟು, ಹುಳು, ಮುಂತಾದವುನಾಶವಾಗುತ್ತವೆ. ಇದರಲ್ಲಿ ಎಲ್ಲಾ ಶಾಸ್ತ್ರೀಯ ಪದಾರ್ಥಗಳೇ ಸೇರಿರುತ್ತವೆ. ಇದನ್ನು ಬ್ರಷ್ ಅಥವಾ ಬೆರಳಿನಿಂದ ಉಪಯೋಗಿಸಬಹುದು. ಒಂದಾವರ್ತಿ ಪರೀಕ್ಷಿಸಿ ನೋಡಬೇಕಾದ್ದು. ಟಿ 1 ಕ್ಕೆ 5 ಆಣೆ.

[ಸೂಚನೆ:—ಮೇಲಿನ ಪುಡಿಗಳಲ್ಲಿ ಬತ್ತದಹೊಟ್ಟಿನಬೂದಿ, ಸೀಮೆಸುಣ್ಣ ಇವು ಸೇರಿಲ್ಲ. ನಕಲು ಮೂಲುಗಳಿಗೆ ಮೋಸಹೋಗಬೇಡಿ. ವ್ಯಾಪಾರಿಗಳಿಗೆ ಹೆಚ್ಚು ಕಮಿಷನ್ ಕೊಡಲ್ಪಡುವುದು. ನಮ್ಮಲ್ಲಿ ಎಲ್ಲಾ ನಿಧವಾದ ಆಯುರ್ವೇದೀಯ ಮಹೌಷಧಗಳೂ ತಯಾರಾಗುತ್ತವೆ. ಕ್ಯಾಟಲಾಗಿಗೆ ಬರೆಯಿರಿ]

ಪ್ರೊಪ್ರೈಟರ್ಸ್
ಎಸ್. ಎನ್. ಪಂಡಿತ್ ಅಂಡ್ ಸನ್ಸ್

ಅಡ್ರೆಸ್
ದಿ ಮೈಸೂರು ಆಯುರ್ವೇದಿಕ್ ಫಾರ್ಮೆಸಿ
೧೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

Manufg Chemists Druggists & Physician

THE
Indian Naturopath

A Monthly Health Magazine, expounding the Philosophy of Naturism and the Several Systems of Nature Cure

Annual Subscription Rs. 1—8—0

A unique medium for Advertisements

For further particulars apply to—
The Editor "Indian Naturopath"
Bezwada.

H. S. KAMAL SHERIFF, DENTIST
Lansdowne Buildings, Mysore

We prepare artificial teeth with which any hard substance can be chewed. We Extract even the strongest teeth with the greatest aese. Stuffing the hollow tooth with gold and silver a speciality. Every work is done to entire satisfaction.

A Bank for Business

Constantly growing is the number of Leading Commercial and Industrial Concerns who use the service of this Bank.

These enterprises find that they are getting from this Bank a greatly specialised service by the careful personal attention of a staff experienced in the particular banking needs of their business.

Does Your Banking Service Need Improvement?
Let Any Of Our Branch Agents Talk With You

THE QUILON BANK
(Incorporated in Travancore, 1919)
Head Office—QUILON
—BRANCHES—

Alleppey	Ernakulam	Madras	Shertallay
Allwaye	Erode	Madura	Tenkasi
Bangalore Cantt.	Hyderabad	Mount Road	Tinnevelly Jn.
Bangalore City	Jaffna	Mysore	Tinnevely Town
Chirayinkil	Kayamkulam	Nagarcoil	Trichinopoly
Cochin	Kandy	Quilon	Trivandrum
Coimbatore	Karaikudi	Royapettah	Tuticorin
Coonoor	Kottayam	Secunderabad	Vellore

ಮಹಾಭಾರತ ರಹಸ್ಯ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು.)

ಶ್ರೀಕೃಷ್ಣನ ತಾಟಸ್ಥ್ಯವನ್ನು ಕಾಪಾಡುವ ನಿಮಿತ್ತವಾಗಿ ಈ ರಥಚಕ್ರಭಂಗವನ್ನು ಶಾಪಕೃತವಾದುದಾಗಿ ಮಹಾಭಾರತಕಾರನು ಒದಲಾಯಿಸಿ ಹೇಳಿರುವನು. ಈ ಕರ್ಣನು ೨೨ ಮಂದಿ ರಾಕ್ಷಸರಾಚರರನ್ನು ಸೇನೆಗಳೊಂದಿಗೆ ಕೊಂಬನೆಂದು ಋಗ್ವೇದದಲ್ಲಿದೆ. ಅವರು ಘಟೋತ್ಕಚರೂ, ಅವರ ಮಿತ್ರರಾಜರೂ ಇರಬಹುದು. ಇಷ್ಟೇಅಲ್ಲದೆ ಕರ್ಣನ ತೇಜೋಮಯ ಕವಚವನ್ನು ಇಂದ್ರಾವತಾರ ಪುರುಷನು ಯಾಚನೆ ಮಾಡಿ ಅಪಹರಿಸಿದಂತೆ ಒಂದು ಮಂತ್ರದಲ್ಲಿಯೂ ಕರ್ಣನು ಕೊಟ್ಟಂತೆ ಮತ್ತೊಂದು ಮಂತ್ರದಲ್ಲಿಯೂ ಸ್ಪಷ್ಟವಾಗಿ ತಿಳಿಸಿರುತ್ತದೆ.

ವೇದೋಕ್ತವಾದ ಶ್ರೀಕೃಷ್ಣನ ಹೆಸರೇ ವ್ಯಾಸನಾಮವೇ ಭಾರತಾದಿ ಗ್ರಂಥಗಳಲ್ಲಿ ಶೌನಕಾದಿಗಳಿಗೆ ತಿಳಿಸಲ್ಪಟ್ಟಿದೆ ವಾಸನನಾಮವೇ ವಾಸುದೇವನಾಮವಾಗಿದೆ. ಶೌನಕೀಯಶಬ್ದದಲ್ಲಿ ನಾಮೈಕದೇಶವನ್ನು ಶೂರ ಎಂಬ ಇತಿಹಾಸಕಾರರು ಗ್ರಹಿಸಿರುವರು ವಸು ಶಬ್ದದಲ್ಲಿ ಮಾತ್ರ ದೇವಶಬ್ದವನ್ನು ಸೇರಿಸಿದರು. ಇಷ್ಟೇ ಅಲ್ಲದೆ ಕರ್ಣಾರ್ಜುನ ಯುದ್ಧ ಸಮಯದಲ್ಲಿ ಕರ್ಣನಿಗೆ ಕೃಷ್ಣನು ಅಸ್ತ್ರವು ಕೂಡ ಮರೆಯುವಂತೆ ಮಾಡಿದನೆಂದು ಒಂದು ಮಂತ್ರದಲ್ಲಿ ಸ್ಪಷ್ಟವಾಗಿರುತ್ತದೆ. ಮೇಲ್ಕಂಡ ಕಾರಣಗಳನ್ನು ಹಿಡಿದು ಕೃಷ್ಣಾರ್ಜುನ ಕರ್ಣರೆಂದು ನಾಮಾಂತರವುಳ್ಳ ವೈಕುಂಠ ಕುತ್ಸ ಶುಷ್ಣರು ಭಾರತಪ್ರಸಿದ್ಧ ಕೃಷ್ಣಾರ್ಜುನಕರ್ಣರೆಂದು ನಾವು ನಿಶ್ಚಯಿಸಬಹುದು. ಭಾರತಕಾರನು ವೇದೋಕ್ತನಾಮಗಳಿಂದ ೨ ಮೂವರು ಚಾರಿತ್ರಿಕ ಪುರುಷರ ಕೃಷ್ಣಾರ್ಜುನಕರ್ಣ ನಾಮಗಳನ್ನು ಗ್ರಹಿಸಿ ಕುತ್ಸಶುಷ್ಣಾದಿ ನಾಮಗಳನ್ನು ಉದ್ದೇಶಪೂರ್ವಕವಾಗಿ ಬಿಟ್ಟಿರುವನು. ವೈದಿಕೇತಿಹಾಸವನ್ನು ಸ್ವಲ್ಪ ಗುಪ್ತ ಭಾಷೆಯಲ್ಲಿ ಬರೆಯುವಿಕೆಯು ಅತನ ಉದ್ದೇಶವು. ಹಾಗೆ ಒರೆಯುವಾಗ ಸ್ವಾಭಿಪ್ರಾಯಾತಿಶಯ ಗುಣವಾಗಿ ಪಾತಪೋಷಣವನ್ನು ಮಾಡುತ್ತಾ ಕಥೆಯನ್ನು ಸ್ವಲ್ಪ ಒದಲಾಯಿಸಿ ಒರೆಯಲು ಅತನಿಗೆ ಅವಕಾಶವು ದೊರೆಯದು. ವೇದಗಳಲ್ಲಿ ಕೃಷ್ಣನು ಇಂದ್ರಾವತಾರವೆಂದಿದೆ. ಭಾರತದಲ್ಲಿ ವಿಷ್ಣುವಿನ ಅವತಾರವೆಂದಿದೆ. ಈ ಭೇದಕ್ಕೆ ಕಾರಣವೇನೆಂದರೆ, ವೇದಗಳಲ್ಲಿ ವರ್ಣಿಸಲ್ಪಟ್ಟ ವಿಶ್ವಾಧ್ಯಕ್ಷನಾದ ಮೈ ಹೇಂದ್ರನನ್ನು ಭಾಗವತಮತಸ್ಥರು ವಿಷ್ಣುವಾಗಿ ಗ್ರಹಿಸುವಿಕೆಯೇ. ಅವರಾಜೀನ ವಾಜ್ಮಯದಲ್ಲಿ ಇಂದ್ರನು ವೇದೋಕ್ತ ಸಾರ್ವಭೌಮಸ್ಥಾನದಿಂದ ಚ್ಯುತನಾಗಿ ಸಾಮಾನ್ಯ ಪರ್ಜನ್ಯದೇವತೆಯಾಗಿ ಬದಲಾವಣೆಯಾಗಿರುವನು. ಪರ್ಜನ್ಯನು ಮಹೇಂದ್ರನ ವಿಭೂತಿಯೇ ಹೊರತು ಪರ್ಜನ್ಯನು ಮಾತ್ರನೇ ಮಹೇಂದ್ರನಲ್ಲ. ವೇದೋಕ್ತ ವಿಷ್ಣುನಾಮವು ಯಜ್ಞಪದವು. ಭಾಗವತರ ವಿಷ್ಣುವು ಪರಮೇಶ್ವರನು. ಯಜ್ಞವು ಅತನ ವಿಭೂತಿಯು. ಈ ಅಭಿಪ್ರಾಯ ಭೇದವೇ ಮೇಲ್ಕಂಡ ಭೇದಗಳಿಗೆ ಕಾರಣವು.

ಶ್ವೈತ್ಯನಿಗೆ ಅಂಬರೀಷ, ಭಯಮಾನ, ಶ.ಜಾಶ್ವ, ಸುರಾಧಸ್, ಸಹದೇವ ಎಂಬ ಹೆಸರುಳ್ಳ ೫ ಮಂದಿ ಪುತ್ರರು ಇದ್ದಂತೆ ಋಗ್ವೇದದಲ್ಲಿ ಸ್ಪಷ್ಟೋದಾಹರಣವಿದೆ. ಇವರಲ್ಲಿ ಜ್ಯೇಷ್ಠನಾದ ಅಂಬರೀಷನಿಗೆ ಶತ್ರು, ವೃಷಭ, ಅಜಾತಶತ್ರು ನಾಮಾಂತರಗಳು ಕೂಡ ಇರುತ್ತವೆ. ಈತನೇ ಭಾರತ ಪ್ರಸಿದ್ಧ ಧರ್ಮರಾಜನು. ಶತ್ರುವೆಂದರೆ ಕಾಂತಿಪರನು. ವೃಷಭನೆಂದರೆ ಧರ್ಮಸ್ವರೂಪನು. ಭಾರತಕಾರನು ಅಂಬರೀಷ ನಾಮವನ್ನು ಉದ್ದೇಶಪೂರ್ವಕವಾಗಿ ಬಿಟ್ಟು ವೃಷಭ ಶಬ್ದಾರ್ಥವಾದ ಧರ್ಮರಾಜ, ಅಜಾತಶತ್ರುನಾಮಗಳನ್ನು ಪವಿತ್ರ ಗ್ರಹಿಸಿದನು. ಪುರಾಣಪ್ರಸಿದ್ಧನಾದ ಅಂಬರೀಷನಾಮಾಂತರವಾದ ನಾಭಾಗಶಬ್ದವು ಧರ್ಮರಾಜವಾಚಕವಾಗಿಯೇ ಇರಬಹುದು ಅಭಾಗನೆಂದರೆ ದಾಯವಿಲ್ಲದವನು. ನಾಭಾಗನು ದಾಯವುಳ್ಳವನು. ಇದು ನನ್ನ ಊಹೆ. ವೇದಗಳಲ್ಲಿ ಇದಕ್ಕೆವುಂತ್ರ ಸ್ಪಷ್ಟೀಕ ಪ್ರಮಾಣವಿಲ್ಲ. ಭಯಮಾನಶಬ್ದವು ಅಂತರ್ಭಾವಿತಣಿಜ್ಞರ್ಥವು; ಅಂದರೆ ಭಯಗೊಳಿಸುವನೆಂದರ್ಥ. ಭಾರತದಲ್ಲಿಯ ಭೀಮ ಶಬ್ದವು ಇದರ ಸಮಾನಾರ್ಥವು. ಸುರಾಧಸ್—ನಕುಲನು ಸ್ವನಾಮದಿಂದಲೇ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವನ. ಪಂಚಪ್ರಾಣ ದೇವತೆಗಳಾದ ಮರುತ್ತುಗಳೇ ಈ ಐದು ಮಂದಿಯಾಗಿ ಅವತರಿಸಿದಂತೆ ಸ್ಪಷ್ಟವಾಗಿರುತ್ತದೆ. ಧರ್ಮರಾಜನು ಉದಾತ್ತನಾವತಾರವು. ಉದಾತ್ತವು ತೇಜೋಮಯವಾದುದು. ಉತ್ಕ್ರಾಂತಿಹೇತುವು. ಆದದರಿಂದ ಧರ್ಮರಾಜನನ್ನು ಯಮಾವತಾರನಾಗಿ ಭಾರತಕಾರನು ಹೇಳಿರುವನು. ಭೀಮನು ವ್ಯಾನಾವತಾರವು. ವ್ಯಾನವೇ ಸರ್ವ ಕರ್ಮಗಳನ್ನು ಮಾಡಿಸುವ ಶರೀರರಕ್ಷಕವಾಯುವು ಅರ್ಜುನನೇ ಪ್ರಾಣಾವತಾರವು. ಉಪನಿಷತ್ತುಗಳಲ್ಲಿ ಪ್ರಾಣವು ಇಂದ್ರವಿಭೂತಿಯಾಗಿ ಹೇಳಲ್ಪಟ್ಟಿರುವದರಿಂದ ಅತನು ಇಂದ್ರಾವತಾರನೆಂದು ಹೇಳಿದೆ. ನಕುಲಸಹದೇವರು ಸಮಾನಅಪಾನ ಅವತಾರರು. ಸಮಾನ ಅಪಾನ ಇವೆಂಡೇ ದೇವವೈದ್ಯರು. ಸರಿಯಾದ ಜೀರ್ಣಶಕ್ತಿ, ಜರಾಶಕ್ತಿ, ನಿರ್ಮಲತ್ವ ಇವೇ ಎಲ್ಲರಿಗೂ ಆರೋಗ್ಯಕಾರಕಗಳಲ್ಲವೇ? ಸಮಾನ್ಯವಾಯುವು ಇತರ ವಾಯುವುಗಳೊಂದಿಗೆ ಸಂಘೀಭವಿಸದು. ಆದುದರಿಂದ ನಕುಲ ನಾಮವು ಅದಕ್ಕೆ ಕೊಡಲ್ಪಟ್ಟಿರುತ್ತದೆ (ನಕೋಲತೀತಿ ನಕುಲಃ) ಎಂದು ವ್ಯುತ್ಪತ್ತಿ. ಕೋಲತೀತಿ ಎಂದರೆ ಇತರ ವಸ್ತುವಿನೊಂದಿಗೆ ಸೇರಿರುವಿಕೆ). ವೇದೋಕ್ತ ಸುರಾಧಶಬ್ದವು ಒಳ್ಳೇ ಸಹೋದರರನ್ನು ಉಳ್ಳವನೆಂಬ ಅರ್ಥದಲ್ಲಿ ವರ್ತಿಸುತ್ತದೆ. ಆದುಕೂಡ ಸಮಾನ ವಾಯುವಿಗೇ ಹೇಳಿದರೂ ಪ್ರಧಾನ ಪ್ರಾಣ ವಾಯುವಿನೊಂದಿಗೆ ಕಲೆತು ಸದಾ ಸಂಚರಿಸುವದರಿಂದಲೇ ಅಪಾನಕ್ಕೆ ಸಹದೇವನಾಮವು ಬಂದಿರುತ್ತದೆ. ಪ್ರಾಣವೇ ದೇವನು. ಅಪಾನವೇ ಸಹದೇವನು. ಈ ಮರುತ್ತುಗಳು ಮನುಷ್ಯರಾಗಿ ಹುಟ್ಟಿದರೂ ಇವರನ್ನು ಸ್ತುತಿಸಿದವರಿಗೆ ಅಮೃತತ್ವವು ಸಿದ್ಧಿಸುವದೆಂದು ಒಂದು ಮಂತ್ರದಲ್ಲಿ ಸ್ಪಷ್ಟವಾಗಿದೆ. ಆದುದರಿಂದ ಭಾರತಚರಿತ್ರವು ಪಾವನವಾದದ್ದು.

ಈ ಪಾಂಡವರ ತಾಯಿಯು ವೃಷ್ಟಿ ಎಂಬ ನಾಮದಿಂದ ವೇದದಲ್ಲಿ ವ್ಯವಹರಿಸಲ್ಪಟ್ಟಿರುವಳು. ವೃಷ್ಟಿಯೆಂದರೆ ಭೂಮಿ ಎಂದರ್ಥ. ಆಕೆಯು ಭೂಮಿಯ ಅವತಾರವು. ಪೃಥಾಶಬ್ದವು ಪೃಥಿವೀ ಶಬ್ದದ ಸಮಾನಾರ್ಥಕವು. ಪಾಂಡವರ ಹೆಂಡತಿ ದ್ರೌಪದಿಯು ವೇದಗಳಲ್ಲಿ ಘೋಷಯೆಂಬ ನಾಮವಿಂದ ವ್ಯವಹರಿಸಲ್ಪಟ್ಟಿರುವಳು. ಈಕೆಯು ಅಶ್ವಿನೀದೇವತೆಗಳ ಅನುಗ್ರಹದಿಂದ ಅರ್ಜುನನನ್ನು ಹೊಂದಿದಳೆಂದು ಒಂದು ಮಂತ್ರದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟಿದೆ. ಮತ್ತೊಂದುಮಂತ್ರಗಳಲ್ಲಿ ವರಕ್ರಮಗಳು ಐದು ಮಂದಿಯೂ ವಜ್ರವಂಶಸ್ಥಳಾದ ಈಕೆಯನ್ನು ತನ್ನ ರಥದ ಮೇಲೆ ಕೂಡಿಸಿಕೊಂಡು ಕರೆದುಕೊಂಡು ಹೋದಂತೆಯೂ ತನ್ನ ಕರ್ಮಗಳಲ್ಲಿ ಆಕೆಯನ್ನು ಭಾಗಸ್ವಾಮಿನಿಯಾಗಿ ಮಾಡಿದಂತೆಯೂ ತಿಳಿಸಿದೆ. ಈಕೆಯೇ ದ್ರೌಪದಿ. ಪಾಂಡವರು ಐದು ಮಂದಿಗೂ ಒಬ್ಬಳೇ ಹೆಂಡತಿಯಾದುದಕ್ಕೆ ಪ್ರಮಾಣವಾಯಿತು. ವೈದಿಕಕಾಲದಲ್ಲಿ ಒಂದೇ ರಥವನ್ನು ಏರುವದಂದರೆ ಅತನ ಹೆಂಡತಿಯಾಗುವುದೇ ಎಂದು ತಿಳಿಯಬೇಕಾಗುತ್ತೆ. ಈಘೋಷೆಯು ವಿಷಿತಶುಷ್ಕ ಎಂದು ಹೇಳಲ್ಪಟ್ಟಿರುವಳು ವಿಷಿತಸ್ತನ ಎಂದರೆ ಬಿಚ್ಚಿಕೊಂಡಿರುವ ಹೆಜ್ಜೆ ತಲೆಕೂದಲನ್ನುಳ್ಳವಳು. ಇದು ಕೂಡ ಆ ಘೋಷೆಯೇ ದ್ರೌಪದಿ ಎಂದು ನಿಶ್ಚಯಿಸಲು ಆಧಾರವಾಗುವುದು ಈಕೆಯು ಕೃಷ್ಣವರ್ಣ ಮಗಳು. ಕೃಷ್ಣನಂತನು ವಜ್ರವಂಶಸ್ಥನು. ಅತನಿಗೆ ಏದಧಿ ಎಂಬ ನಾಮಾಂತರವುಂಟು. ಏದಧಿಯೆಂದರೆ ಕರ್ಮಠನು. ಇದು ಯಾಜ್ಞಸೇನಶಬ್ದದ ಸಮಾನಾರ್ಥಕವು.

ಕುಯವಾಚ್ ವೃದ್ಧವಾಚ್, ದುರ್ಯೋಧನ ಎಂಬ ನಾಮಗಳನ್ನುಳ್ಳ ಒಬ್ಬ ಮಹಾವೀರನನ್ನು ಕುತ್ಸನು ಜಯಿಸಿದಂತೆ ಋಗ್ವೇದದಲ್ಲಿ ಹೇಳಿದೆ. ಈ ಕುಯವೇ ದುರ್ಯೋಧನನು. ಅತನ ದುರ್ಯೋಧನ ನಾಮವೇ ದುರ್ಯೋಧನವಾಗಿದೆ. ಕುಯನ ಕುಯ ಶಾಕ್ ಶಬ್ದಗಳು ಕುತ್ಸಿತವಾಗಿ ಮಾತಾಡುವನೆಂಬ ಅರ್ಥವುಳ್ಳವುಗಳು. ಪರುಷವಾಕ್ ಎಂದು ಕಾರ್ಪಣ್ಯ ಕರುಶಬ್ದವು ಕೂಡ ಇದೇ ಅರ್ಥವನ್ನು ಕೊಡುವದು. (ಕುತ್ಸಿತಂ ರೌತೀತಿಕುರುಃ ಎಂದು ವ್ಯುತ್ಪತ್ತಿ). ಕುರುಪಾಂಡವರೆಂದು ಪಾಂಡವರನ್ನು ಪ್ರತ್ಯೇಕವಾಗಿ ವ್ಯವಹರಿಸುವಿಕೆಯು ಧೃತರಾಷ್ಟ್ರ ಪುತ್ರರ ಕುರು ನಾಮವು ವಂಶತ್ವವಾಗದೆ ಗುಣತ್ವವೆಂದು ಬೋಧಿಸುತ್ತದೆ. ಇವರ ಪೂರ್ವ ಪುರುಷನು ಕುರುವಾರುವಿಕೆಯು ಈ ನಿರ್ವಚನಕ್ಕೆ ಪ್ರತಿಬಂಧಕವಾಗದು.

ಇಂದ್ರಾವತಾರ ಪುರುಷನು ತನ್ನ ಸ್ನೇಹಿತರಾದ ಶತ್ರು ಪುಷ್ಕರ ಮೂಲಕ ಕ್ಷೇತ್ರನನ್ನು ಸಾಧಿಸುವಂತೆ ಮಾಡಿದಂತೆ ಒರೆದು ಮಂತ್ರದಲ್ಲಿ ಸ್ಪಷ್ಟವಾಗಿದೆ. ಕುತ್ಸುವಿನ ಇಂದ್ರ ಸಾರ್ಥನಾ ಮಂತ್ರದಲ್ಲಿ ನಿನ್ನ ಸಹಾಯದಿಂದ ಶತ್ರುಗಳಿಂದ ಅಕ್ರಮಿಸಲ್ಪಟ್ಟ ನನ್ನ ಭಾಗವನ್ನು ನಾವು ಜಯಿಸುವಂಥವರಾಗೋಣ ಎಂದಿದೆ. ಆದ್ದರಿಂದ ಕುರುಪಾಂಡವರ ಯುದ್ಧಕ್ಕೆ ಕಾರಣವು ರಾಜ್ಯಭಾಗ ಸಂಬಂಧವೆಂದು ವ್ಯಕ್ತವಾಗುವದು.

ದುರ್ಯೋಧನಾದಿಗಳ ತಾಯಿಯು ಪರ್ಶು ವೆಂದು ವೇದಗಳಲ್ಲಿ ಹೇಳಲ್ಪಟ್ಟಿದೆ. ಈ ಪರ್ಶುವು ಒಂದೇಬಾರಿ ೨೦ ಮಂದಿ ಪುಷ್ಕರನ್ನು ಹೆತ್ತಂತೆ ಎರಡು ಕಡೆ ಉಲ್ಲೇಖವಿರುತ್ತದೆ. ಭಾರತದಲ್ಲಿ ಕೂಡ ಕರ್ಣಪರ್ವಾದಿಯಲ್ಲಿ ಗತಿಸಿದ, ಉಳಿದ ವೀರರ ಪಟ್ಟಿಯನ್ನು ಕೊಡುವ ಸಂದರ್ಭದಲ್ಲಿ ಧಾರ್ತರಾಷ್ಟ್ರರಲ್ಲಿ

(೭ ನೇ ಪುಟದಲ್ಲಿ ಮುಂದುವರಿದಿದೆ)

ವನಿತ್ರಾಲೋಕ

ಆಧುನಿಕ ಯುವತಿ

(ಯುವತಿಯೇ ಓದಬೇಕು)

ಈ ಕಾಲದಲ್ಲಿ ಯಾವ ಪತ್ರಿಕೆಯನ್ನು ನೋಡಿದರೂ ಸ್ತ್ರೀ ಜನಾಭ್ಯುದಯಕ್ಕಾಗಿ ಬೇಕಾದಷ್ಟು ಬರೆದಿರುತ್ತಾರೆ. ಎಲ್ಲರೂ ಈ ವಿಷಯದ ಮೇಲೆ ಉಪನ್ಯಾಸ ಮಾಡುವವರೇ ಆದ್ದರಿಂದ ಅದರಿಂದ ಅವರ ಅಭಿಪ್ರಾಯ ತೀರ್ಮಾನಗಳನ್ನು ನೋಡಿದರೆ ಜನರಿಗೆ ಬಹಳ ವಿಸ್ತೀರ್ಣವಾಗಿ ತೋರುತ್ತದೆಯೇ ವಿನಾ ವಸ್ತ್ತೇನೂ ಇಲ್ಲ.

"ಆಧುನಿಕ ಯುವತಿ" ಎಂದ ಹೇಳಿದ ಕ್ಷಣ ಮಾತ್ರದಲ್ಲಿ ನಮ್ಮ ಕಣ್ಣುಗಳಲ್ಲಿ ಎಂತಹ ಚಿತ್ರವು ಉದಯಿಸುತ್ತಿದೆ? ಉದ್ದವಾಗಿ, ಸಣ್ಣಗೆ, ಶುಭ್ರವಾದ ನಾಜೂಕಾದ ಉಡುಪುಗಳನ್ನುಟ್ಟು ಆನಂದವಾಗಿ ಸ್ವೇಚ್ಛೆಯಿಂದ ಓಡಾಡುತ್ತಿರುವ ಒಂದು ಮನೋಹರವಾದ ವ್ಯಕ್ತಿಯು ಪ್ರತ್ಯಕ್ಷವಾಗುತ್ತದೆ. ಅವಳ ತಾಯಿಯು ಈ ವಯಸ್ಸಿನಲ್ಲಿ ಹೇಗೆ ಇದ್ದಳೋ ನಾವು ಹೋಲಿಸಿ ನೋಡಿದರೆ ಆಗ ಅವರಿಬ್ಬರಿಗೆ ಇರುವ ಬೇಧವು ಗೊತ್ತಾಗುತ್ತದೆ. ಅವಳಲ್ಲೂ ಇವಳಲ್ಲೂ ಒಳ್ಳೇ ವಿಷಯಗಳೇ ಇವೆ. ಒಳ್ಳೆಯದಲ್ಲದ ವಿಷಯಗಳೂ ಇವೆ. ಯಾವುದರಿಂದ ಸ್ತ್ರೀಯರಿಗೆ ಉತ್ತಮವಾದುದೋ ಅದನ್ನೇ ಸ್ತ್ರೀಯು ಅನುಸರಿಸಬೇಕು. ನಮ್ಮ ಬಾಲೆಯರಿಗೆ ಅದನ್ನೇ ಆದರ್ಶವನ್ನಾಗಿ ತೋರಿಸಬೇಕು. ಬಾಲಿಕೆಯರ ಮನಸ್ಸು ಬೆಣ್ಣೆಯಂತಿರುತ್ತದೆ ಶೈಶವದಲ್ಲಿ ಅವರ ಮನೋಕ್ಷೇತ್ರಗಳಲ್ಲಿ ಎಂತಹ ಉಪದೇಶಗಳ ಬೀಜವನ್ನಾದರೂ ಬಿತ್ತಿದರೂ ತಾರುಣ್ಯ ಬರುವಾಗ ಅವೇ ವೃಕ್ಷಗಳಾಗಿ ಬೆಳೆಯುತ್ತವೆ. ಆದ್ದರಿಂದ ನಮ್ಮ ಬಾಲಿಕೆಯರಿಗೆ

(೨ನೇ ಪುಟದಿಂದ ಮುಂದುವರಿದಿದೆ)

ಗತಿಸಿದವರು ೯ ಮಂದಿ ಉಳಿದವರು ೧೧ ಮಂದಿ ಎಂದು ಲೆಕ್ಕ ಮಾಡಲ್ಪಟ್ಟಿದೆ. ಈ ಪರ್ವವಿನ ಪುತ್ರರಲ್ಲಿ ದ್ರಶ್ಯಾಶ ಎಂಬುವನೊಬ್ಬನು ಇದ್ದಂತೆ ವೇದಗಳಿಂದ ತಿಳಿಯಬರುತ್ತದೆ. ಅವನಿಗೇ ಭಾರತದಲ್ಲಿ ದುಶ್ಶಾಸನ ಎಂದು ಹೆಸರು. ಪಾಂಡವ ಪಕ್ಷಪಾತಿಯಾದ ತಪಸ್ಸುನೆಂಬ ಋಷಿಯು ಈ ಪರ್ವ ಪುತ್ರರಿಂದ ಮಥಿಸಲ್ಪಟ್ಟ ವಿಷಯವು ಆತನ ಸೂಕ್ತದಲ್ಲಿ ಸ್ಪಷ್ಟವಾಗಿ ತಿಳಿಸಿರುತ್ತದೆ ಕುತ್ಸನ ಒಂದು ಸೂತ್ರದಲ್ಲಿಯೂ ಕೂಡ ಪರ್ವವಿನ ಪುತ್ರರು ತನ್ನನ್ನು ಒಂದು ಗುಳಿಯಲ್ಲಿ ತಳ್ಳಿದಂತೆ. ಕೂಪಪತಿತನಾದ ಆತನು ದೇವತೆಗಳನ್ನು ಪ್ರಾರ್ಥನೆ ಮಾಡಿದ ಸಂದರ್ಭದಲ್ಲಿ ತಿಳಿಸಿರುತ್ತದೆ.

ದುರ್ಯೋಧನನು ಕೊನೆಯ ಯುದ್ಧದಲ್ಲಿ ಓಡಿ ಹೋಗಿ ನೀರಿನಲ್ಲಿ ಔತ ಕೊಂಡಂತೆ ಸ್ಪಷ್ಟವಾಗಿ ತಿಳಿಸಿರುತ್ತದೆ. ಪಾಂಡವರು ಕೃಷ್ಣನುಗ್ರಹದಿಂದ ಆ ಜಲವನ್ನು ಸ್ತಂಭಿಸಿ ಅವನನ್ನು ಸುಹಾರ ಮಾಡಿದರಂತೆ. ಈ ಮಹಾಭಾರತಯುದ್ಧವು ಹಸ್ತಾ ನಕ್ಷತ್ರದಲ್ಲಿ ರವಿಯಿರಲಾಗಿ ದಕ್ಷಿಣಾಯನ ಪ್ರದೇಶಕಾಲದಲ್ಲಿ (ಅಂದರೆ ಇಂದಿಗೆ ೬೫೦೦ ವರ್ಷಗಳಿಗೆ ಹಿಂದೆ) ನಡೆದಂತೆ ಕುತ್ಸವು ಎರಡು ಮಂತ್ರಗಳಲ್ಲಿ ತಿಳಿಸಿರು

ಓಂ — ಅನುವಾದಕ.

ಕ್ರಮವಾಗಿ ಬೋಧಿಸುವ ಕರ್ತವ್ಯವು ತಾಯಿ ತಂದೆಯರದು ಉಪಾಧ್ಯಾಯರದೂ ಆಗಿದೆ.

ಆಧುನಿಕ ಯುವತಿಯ ಲೋಪದೋಷಗಳು ಒಂದೆರಡಲ್ಲ. ಏತರಿಂದ ಈ ದೋಷಗಳು? ಒಂದು ಘನವಾದ ಆದರ್ಶವೂ ಆಶಯವೂ, ಜೀವನದಲ್ಲಿ ಇಲ್ಲದೆ ಹೋದುದರಿಂದ ಆಧುನಿಕವಾಗಿಯೂ ನಾಜೂಕಾಗಿಯೂ ಇರುವುದಕ್ಕಾಗಿ ಆಂಗ್ಲೇಯರನ್ನು ಅನುಸರಿಸುವುದೇ ವರ್ಗವೆಂದು ಅವರ ತಿಳುವಳಿಕೆ. ಮುಖಕ್ಕೆ ರಂಗು, ವೈರಾಗಳನ್ನು ಹೇಗೆ ಹಚ್ಚಿಕೊಳ್ಳಬೇಕೋ ಕಲಿಯುತ್ತಾಳೆ. ಸ್ವಲ್ಪ ಗಂಭೀರ, ಅಟ ಟೊಪ ಆಡಂಬರ ಇವುಗಳನ್ನು ಅಪ್ರಯತ್ನವಾಗಿ ಅಭ್ಯಾಸ ಮಾಡುತ್ತಾಳೆ. ತನ್ನ ಅಂದ ಚಂದಗಳನ್ನು ನಾಲ್ಕು ಜನರು ನೋಡಿ ಮೆಚ್ಚಲಿ ಎಂದು ಪ್ರಯತ್ನಿಸುವಳು ತನ್ನ ತಾಯಿಯರ ಅಜ್ಜಿಯರ ನಿರಾಡಂಬರ ಶಕ್ತಿವನ್ನೂ ಅಕೃತ್ರಿಮ ಪ್ರಕೃತಿಯನ್ನೂ, ಆಂತರಚಂದಗಳನ್ನೂ ಸಂರಕ್ಷಿಸುವುದು ಬೇಕಾಗಿಲ್ಲ. ಎಷ್ಟು ಹೊತ್ತಿಗೆ ತನ್ನ ಅಂದ ಚಂದಗಳನ್ನೂ, ವಿದ್ಯೆಯನ್ನೂ ತನ್ನ ಅನುಭವಗಳನ್ನೂ ಲೋಕಕ್ಕೆ ಪ್ರದರ್ಶಿಸಿ ಆಧುನಿಕ ಯುವತಿಯೆಂದು ಮೆಚ್ಚಿಗೆಯನ್ನು ಪಡೆಯಲು ಪ್ರಯತ್ನವೇ ಪ್ರಯತ್ನ ಬೇರೊಂದಿಲ್ಲವಾಗಿದೆ.

ಇನಿಷ್ಟೂ ಕೂಡಾ ಅಭಿವೃದ್ಧಿಗೆ ಚಿಹ್ನೆ ಎಂದು ಹೇಳುತ್ತಿರುವವರು ಅನೇಕರಿದ್ದಾರೆ ಇಲ್ಲಿಯವರೆಗೆ ತಮ್ಮನ್ನು ಭೋಗ್ಯವಸ್ತುಗಳನ್ನಾಗಿ ನೋಡಿದ್ದಾರೆ. ಆದ್ದರಿಂದ ಮುಂದೆ ಸ್ವತಂತ್ರವಾಗಿರಗೊಡಿಸುವರು. ಚಿಕ್ಕಂದಿನಲ್ಲಿ ತಂದೆಯ ಮೇಲೂ, ವಿವಾಹಾನಂತರ ಗಂಡನ ಮೇಲೂ, ವೃದ್ಧಾಪ್ಯದಲ್ಲಿ ಮಕ್ಕಳ ಮೇಲೂ ಏಕೆ ಸ್ತ್ರೀಯರು ಆಧಾರವಾಗಿರಬೇಕು? ಪಾಶ್ಚಾತ್ಯ ಸ್ತ್ರೀಯರಂತೆ ಹೊರಗೆ ಹೊರಟು ಉದ್ಯೋಗಗಳನ್ನು ನಿರ್ವಹಿಸಿ, ಧನಾರ್ಜನೆ ಮಾಡಿ, ಸ್ವತಂತ್ರವಾಗಿ ಏಕೆ ಇರಬಾರದು? ಮಕ್ಕಳನ್ನು ಹೆರುವುದಕೂ ಬೇಕು ಬೇಕಾದ್ದಕ್ಕೆಲ್ಲಾ, ಪರಿಚರ್ಯೆ ಮಾಡುವುದಕ್ಕೂ ಬಿಟ್ಟರೆ ಬೇರೆಂದಕ್ಕೂ ಅಪೇಕ್ಷೆಗಾಗಿ ಹೆಂಗಸರನ್ನು ಎಂದು ಅವರ ವಾದದ ಸಾರಾಂಶ

ಇನ್ನೊಂದು ವಿಧದಲ್ಲಿ ವಾದಿಸುವವರೂ ಇದ್ದಾರೆ. ಬಾಲಿಕೆಯರಿಗೆ ಉನ್ನತ ಪ್ರಾಥಮಿಕ ವಿದ್ಯೆಯ ಆವಶ್ಯಕತೆ ಏನು? ಈ ಹಾಳು ವಿದ್ಯೆ ಏಕೆ ಬಂತಪ್ಪಾ ಹೆಂಗಸರಿಗೆ ಎನ್ನುತ್ತಾರೆ. ಬೇಕಾದರೆ ಸಂಸಾರ ನಿರ್ವಹಣ ಲೆಕ್ಕಾಚಾರಗಳನ್ನು ತಿಳಿದುಕೊಳ್ಳುವುದಕ್ಕೆ ಬರುವಷ್ಟು ಕಲಿತರೆ ಸಾಕು ಎನ್ನುವರು. ಓದಿದರೆ ಜ್ಞಾನವನ್ನು ದುರ್ವಿನಿಯೋಗ ಮಾಡಿ ಕುಟುಂಬ ಸಂಸಾರಗಳನ್ನೆಲ್ಲಾ ಹೈರಾಣ ಮಾಡುತ್ತಾರೆ ಎಂದೂ ಹೇಳುವರು

ಈ ಎರಡು ತೀವ್ರವಾದ ವಾದಗಳೂ ಒಪ್ಪಲಾಗುವುದಿಲ್ಲ. ಸ್ವಲ್ಪ ಯುಕ್ತಾಯುಕ್ತ ಪರಿಜ್ಞಾನವಿರುವ ಯಾರೂ ಒಪ್ಪುವುದಿಲ್ಲ ಇವನ್ನು. ಪಾಶ್ಚಾತ್ಯ ಸ್ತ್ರೀಯರಂತೆ ನಾವೂ ಪ್ರವರ್ತಿಸಬೇಕೆಂದು ನವರು ವಿಶೇಷ ಧನವಂತರಾದ ಭೋಗಪರಾಯಣರೇ ಆಗಿದ್ದಾರೆ. ಇವರು ಕಷ್ಟಪಡವಶ್ಯವೇ ಇಲ್ಲದವರು. ಕಾಲನ್ನು ಕೆಳಕ್ಕೆ ಇಡದೆ ಯಾವಾಗಲೂ ಮೋಟಾರುಗಳಲ್ಲೇ ಓಡಾಡಿಕೊಂಡಿರುತ್ತಾರೆ. ತೆಳ್ಳಗೆ ಉಲ್ಲಿ ಪರೆಯಂತಹ ಸಿಲ್ಕು ಸೀರೆಗಳನ್ನುಟ್ಟು, ಗಿಣಿಗಳಂತೆ ಓಡಾಡಿಕೊಂಡಿರುವವರೆ. ಅವ್ರಿಗೆ ಸಂವೇದನೆಯನ್ನು ಇಲ್ಲಿಡಬೇಕಾದ ಅಗತ್ಯವಿಲ್ಲದ ಘಾತವಾಗಲೂ ಪರಿಚಾರಕಭೃತ್ಯರಿಂದ ಸೇವೆಸಲ್ಪಡುತ್ತಿರುವವರು ಸಾಮಾನ್ಯ ಕುಟುಂಬದಲ್ಲಿ ಹುಟ್ಟಿ ಬೆಳೆದು ಕಷ್ಟಪಡಬೇಕಾದ ಕನ್ಯೆಯರ ವಿಷಯವಿವರಿಗೇನು ಗೊತ್ತು? ಅತ್ತಿಮಾವಂದಿರಿಗೆ ಉಪಚಾರನೂಡುವುದಕ್ಕೂ, ಗಂಡನಿಗೆ ಸುಖವುಂಟುಮಾಡುವುದಕ್ಕೂ ಮಕ್ಕಳನ್ನು ಸಾಕುವುದಕ್ಕೂ ಎಷ್ಟು ಸಹನೆಯೂ ಲೋಕಾನುಭವವೂ ಎಷ್ಟು ತೀಕ್ಷ್ಣವೂ ಇರಬೇಕೋ ಅದು ಆಧುನಿಕ ಸುಪ್ರದಾಯಗಳಲ್ಲಿ ಬೆಳೆದು ನೆತ್ತಿಹೊರೆಯನ್ನು ಕಾಣದೆ ದೊಡ್ಡ ಚಿಕ್ಕ ತಾರತಮ್ಯವಿಲ್ಲದೆ ಪಾಶ್ಚಾತ್ಯ ನಾಗರಿಕ ವ್ಯಾಮೋಹವನ್ನು ಕಂಡ ಭರ್ತೃಗೆ ಏನು ಗೊತ್ತು. ಅವಳಿಗೆ ಗೊತ್ತಿರುವುದು ಗಂಡನನ್ನು ಗೊಳುಹುಯ್ಯುವುದು, ಅಷ್ಟೆ

ಸಾಮಾನ್ಯವಾಗಿ ಭಾರತೀಯ ಕುಟುಂಬವು ಧನ ಸಂಪತ್ತಿನಿಂದ ಕೂಡಿದ್ದಲ್ಲ ತಂದೆಯು ಸಂಪಾದಿಸುವ ನಾಲ್ಕು ಕಾಸುಗಳಲ್ಲಿ ಸಂಸಾರನೆಲ್ಲಾ ನಡೆಯಬೇಕು. ಆದ್ದರಿಂದ ಈ ಸಂಸಾರ ಯಾತ್ರೆಯನ್ನು ಸಾಗಿಸಲು ಶೀಲವತಿಯಾದ ಭಾರ್ಯೆಯೇ ಅವಶ್ಯಕ. ಹೀಗೆ ಕಷ್ಟ ಸಹಿಷ್ಣುತೆಯೂ, ಸ್ವಾರ್ಥವಿಹೀನತ್ವವು ಭಾರತೀಯ ನಾರೀವರ್ಣಿಯರಲ್ಲಿಯೇ ಅಭ್ಯಾಸಮಾಡಿ ಕಲಿಯಬೇಕೇ ವಿನಾ ಬೇರೆ ಕಡೆ ಲಭಿಸುವುದಿಲ್ಲ. ಗಂಡನಿಗೂ, ಮಕ್ಕಳಿಗೂ ಪರಿಚರ್ಯೆ ಮಾಡಿದ ದ ಮಾತ್ರಕ್ಕೆ ಭಾರ್ಯೆಯು ಭೋಗ್ಯಸಾಮಗ್ರಿಯಾಗಿಬಿಡುವಳೋ? ತ್ಯಾಗವೂ, ಸ್ವಾರ್ಥರಹಿತತೆಯೂ ಇಲ್ಲದೇ ಪ್ರೇಮ, ಅನುರಾಗಗಳೆಲ್ಲಿ ಜನಿಸುತ್ತವೆ? ಈ ಭೋಗದಾಸ್ಯತ್ವಕ್ಕೆ ನಾವು ವಿಚಾರಿಸಬೇಕಾದ್ದಿರುವುದಿಲ್ಲ.

ಈ ಕಾಲದ ಶಾಲೆಗಳಲ್ಲಿ ವಿದ್ಯೆಯನ್ನು ಕಲಿಯುವ ಬಾಲಿಕೆಯರನ್ನು ನೋಡಿ ಅಷ್ಟಾಗಿ ಸಂತೋಷಪಡಬೇಕಾದುದೇನೂ ಇಂದ. ಸಹಜವಾದ ಮುಗ್ಧತೆಯನ್ನೂ, ನಿರಾಡಂಬರವಾದ ಸೌಂದರ್ಯವನ್ನೂ ಇವರು ನಾಶಪಡಿಸುತ್ತಿದ್ದಾರೆ. ಸ್ವಭಾವದಿಂದ ಹುಟ್ಟಿದ ಕೆಲವು ಗುಣಗಳನ್ನು ಕಲಿತರೇನೇ ಹಕ್ಕಿ ಜನರು ವಿದ್ಯಾವಂತರೆಂಬು ಇವರು ತಿಳಿದುಕೊಂಡಿದ್ದಾರೆ. ಅದಕ್ಕಾಗಿ ಎಷ್ಟಾದರೂ ಕಷ್ಟಪಡುವರು ಆ ಯೌವನವು ಇರುವವರೆಗೇನೇ ಆ ಕೃತ್ರಿಮ ಸೌಂದರ್ಯಗಳೂ ಡಾಂಭಿಕತೆಯೂ ಸಾಗುತ್ತದೆ; ಅಷ್ಟೇ ವಯಸ್ಸು ಕಳೆದರೆ, ಯೌವನವು ಸೊಕ್ಕಿದರೆ ಮುಗಿಯಿತು. ಬಂದೂ ಅವರಿಗೆ ಕೆಲಸಕ್ಕೆ ಬಾರದು. ಒಳ್ಳೆಯ ನಡತೆಯೂ, ಮರ್ಯಾದೆಯೂ, ನಿಸ್ವಾರ್ಥ ಬುದ್ಧಿಯೂ ಭೂಷಣವಾಗಿ ಎಂದಿಗಾದರೂ ಉಳಿದು ಜೀವಿತವನ್ನು ಅಮೃತಮಯವನ್ನಾಗಿ ಮಾಡಬಲ್ಲದು.

[ಅ ಪ. ಅನುವಾದ

ನ್ಯೂಯಾರ್ಕ್ ನಗರದಲ್ಲಿ ಸತ್ತುಹೋದ ಒಬ್ಬ ಮನುಷ್ಯನ ತಲೆಯನ್ನು ಡಿಸ್ಟ್ರಿಕ್ಟ್ ಅಲಾರ್ನಿಯವರ ಕಚೇರಿಯಲ್ಲಿ ಕನ್ನಡಿಯ ಪೆಟ್ಟಿಗೆಯೊಂದರಲ್ಲಿ ಇಟ್ಟು ದ್ರಾವಕವನ್ನು ಹಾಕಿ ಕಾಪಾಡುತ್ತಿದ್ದಾರೆ. ಅದು ಸಣ್ಣಗಿದ್ದದ್ದು ಈಗ ಬಹಳ ದೊಡ್ಡದಾಗಿ ಬೆಳೆಯುತ್ತಿವೆ. ವಾಸನೆಗಳೂ ಬೆಳೆಯುತ್ತಿವೆ. ಒದುಕಿರುವ ಮನುಷ್ಯನಿಗಾಗುವಂತೆಯೇ ಬೆವರು ಸುರಿಯುತ್ತಲಿದೆ. ಇದನ್ನು ಮ್ಯೂಜಿಯಂನಲ್ಲಿ ಇಡಲು ಯೋಚಿಸಿದ್ದಾರೆ.

Weekly Newspaper **SATYAVADI** Every Wednesday

MYSORE (Founded 1917) 2—9—36

A GOLDEN CHANCE To WIN A FORTUNE In OUR
3rd Annual Special Competition No. 17.

Ist PRIZE: Rs. 30,000 For the BEST ATTEMPT	**RS. 50,000**	For RUNNERS UP Rs. 20,000 As 2nd, 3rd & 4th Prizes & Bonuses

GUARANTEED BONUSES

Rs 750 for 1st and Rs 100 for the sudsequent all Correct entries
Rs 35 for one error and Fountain Pens for two error entries

Entrance Fee Re 1 per entry. Rs. 5 only for EIGHT entries from the SAME Competitor.

ENTRIES CLOSE ON 19th OCTOBER.

1 PERS / YES	2 T. SPO / YES	3 B / Y
2 I / IC .	5 D G / G . D	6 TH / S
7 H. M.	8 C / WAY	9 J S
10 P / S	11 M / KEY	12 A.M.
13 S / NET	14 LEM / S	15 W

LIST. 1. After Noon. 2. Bony. 3. Bowery. 4. Convey. 5. Dong and Gond. 6 Hail Mary. 7. His Majesty 8. Ionic 9. Jason. 10. Johnson. 11. Lemons. 12. Monkey. 13. One. 14. Pawns. 15. Persons. 16 Powers. 17. Sonnet. 18. Sunderth. 19. Teaspoons. 20. Thorns. 21. Way under sea. 22. Won.

Instructions:— In Puzzle No. 1. PERS is given on YES; and YES is phonetically equal to S. PERS is on **S.** i.e. **Pers** on S=**Persons.** and hence the solution to puzzle No. 1. is **Persons.** All the correct solutions either as spelt or pronounced phonetically or otherwise are given in the above **List** and all you have to do is to pick up the suitable ones. Enter your answers on any good paper and forward to reach us on or before **19th. October 1936.**

Rules:— (1) **Any number** of entries may be submitted by the **same** competitor in the same envelope, provided each entry of fifteen solutions be accompanied by Re. **One.** (Rs. **Five** only for **Eight** entries from the **same** competitor) per money order or crossed Indian Postal order. (2) Enclose the m. o. receipt or postal order, and a stamped addressed cover with your entries. (3) Write on the outside of your envelope (a) your **name** and address, (b) the number of entries enclosed and (c) the name of the Newspaper in which you saw this advertisement. **Other Rules**, as to the Proprietor's decision; ' distribution of prizes,' ' no correspondence ' &c. as usual. **The Key Solution** lodged with **The V. L. Bank Ltd.,** and the **results** will be published in **the Hindu** on **1st. November 1936.** Address entries &Money orders to:—

THE ALL INDIA COMPETITION No. 17, Puthupally, Kottayam, Travancore.

WIN Rs. 100
By taking part in our
Missing Letters
Competition 3

Last date of entry
25-9-36

For Particulars Apply to:
COMPETITION SEC.
Satyavadi Office,
MYSORE.

Edited, Printed & Published by M. S. Krishna Rao, at the Satyavadi Press, Satyavadi Buildings, Chamaraj Agrahar, Mysore.

ರೂ. 15,000 ಇನಾಮು

ಎರಡೂ ಚೌಕಗಳಿಗೆ ಪ್ರವೇಶ ಫಿ ರೂ. ೧ ಸ್ಪರ್ಧೆ ಸಂ. ೨

ಕೊನೆಯ ತಾ॥ ೧೬-೯-೩೬ ಉತ್ತರ ಪ್ರಸಿದ್ಧಿ ತಾ॥ ೨೨-೯-೩೬

		೪೯	
	೩೪		

ಮೊದಲಿನ ಚೌಕಿನಲ್ಲಿ ೧ ರಿಂದ ೪೯ ರ ವರೆಗೆ ಅಂಕಿಗಳನ್ನು ಉದ್ದ, ಅಡ್ಡ ಹಾಗೂ ಮೂಲೆಯ ಮೇಲಿನ ಬೇರೀಜು ೧೦೬ ಆಗುವಂತೆ ತುಂಬರಿ. ಆದರೆ ೪೯—೩೪ ಈ ಅಂಕಿಗಳನ್ನು ಹಾಗೆಯೇ ಇಡತಕ್ಕದ್ದು : ಒದಲಿಸಬಾಂದು.

		೨೩	

ಎರಡನೇ ಚೌಕಿನಲ್ಲಿ ೨೩ ಅಂಕಿಯನ್ನು ಕಾಯಮವಾಗಿಟ್ಟು ಬೇರೀಜು ೪೮ ಆಗುವಂತೆ ೧ ರಿಂದ ೨೫ ರ ವರೆಗೆ ಅಂಕಿಗಳನ್ನು ತುಂಬರಿ.

ಎರಡೂ ಉತ್ತರಗಳಲ್ಲೂ ಒಂದು ಅಂಕಿಯನ್ನು ಒಂದೇಸಾರಿ ಉಪಯೋಗಿಸಬೇಕು.

ಎರಡು ಉತ್ತರಗಳಲ್ಲಿಯೂ ಒಂದು ಉತ್ತರವನ್ನು ಬಾಂಬೆ ಬುಲಿಯನ್ ಎಕ್ಸ್‌ಚೇಂಜ್ ಲಿಮಿಟೆಡ್ ಇವರಲ್ಲೂ, ಒಂದು ನಮ್ಮ ಆಫೀಸಿನಲ್ಲೂ ಮೊಹರು ಮಾಡಿ ಇಡಲಾಗಿದೆ. ಸ್ಪರ್ಧೆಯಲ್ಲಿ ಭಾಗ ವಹಿಸುವವರಿಗೆ ಸಂಶಯ ಬಂದಲ್ಲಿ ನಮ್ಮ ಆಫೀಸಿನಲ್ಲಿಯ ಉತ್ತರದ ಪಾಕೀಟಿನ ಮೇಲೆ ತಮ್ಮ ಸಹಿ ಅಥವಾ ಮೋಹರು ಮಾಡಬಹುದು. ಉತ್ತರಕ್ಕೆ ೧ ರೂಪಾಯಿನಂತೆ ಫೀ ಕಳಿಸಿ ಬೇಕಾದಷ್ಟು ಉತ್ತರಗಳನ್ನು ಕಳುಹಿಸಬಹುದು. ೧೬ ಕ್ಕಿಂತ ಹೆಚ್ಚು ಉತ್ತರಗಳನ್ನು ಕಳಿಸಿದಲ್ಲಿ ೧೬ ರ ಮೇಲಿನ ಪ್ರತಿಯೊಂದು ಉತ್ತರಕ್ಕೆ ೧೫ ಆಣೆ ಫೀ ತೆಗೆದುಕೊಳ್ಳಲಾಗುವುದು.

ಪ್ರವೇಶ ಫೀಯನ್ನು ಮನಿಯಾರ್ಡರ್, ಪೋಸ್ಟಲ್ ಆರ್ಡರ್ ಅಥವಾ ಸ್ಟ್ಯಾಂಪು ಮುಖಾಂತರ ಕಳಿಸಬಹುದು. ಮಾಣಿಯಾರ್ಡರ್ ಕೂಪನಿನಲ್ಲಿ ಪೂರ್ಣ ವಿಳಾಸವನ್ನು ಬರೆಯಬೇಕು. ಸ್ಥಳಿಕರಿಂದ ಬಿಳಿಗ್ಗೆ ೧೦ ಗಂಟೆಯಿಂದ ಸಾಯಂಕಾಲ ೬ ಗಂಟೆವರೆಗೆ ನಮ್ಮ ಕಚೇರಿಯಲ್ಲಿ ಉತ್ತರಗಳು ಸ್ವೀಕರಿಸಲ್ಪಡುವುವು.

ಇನಾಮು—ಎರಡೂ ಚೌಕಗಳಲ್ಲಿಯ ನಮ್ಮ ಮೊಹರು ಮಾಡಿಟ್ಟ ಉತ್ತರಗಳಿಗೆ ಸಂಪೂರ್ಣವಾಗಿ ಸರಿಹೋಗುವ ಉತ್ತರಗಳಿಗೆ ಮೊದಲಿನ ೫ ಕ್ಕೆ ರೂಪಾಯಿ **೧೦೦೦** ರಂತೆ, ಮುಂದಿನ ೫ ಕ್ಕೆ ರೂಪಾಯಿ **೯೦೦** ರಂತೆ, ಉಳಿದವುಗಳಿಗೆ ರೂಪಾಯಿ **೬೦೦** ರಂತೆ ಇನಾಮುಗಳು ಕೊಡಲ್ಪಡುವುವು.

ಮೊದಲನೇ ಚೌಕದಲ್ಲಿ ಉತ್ತರ ಸರಿಯಿದ್ದವರಿಗೆ

ಮೊದಲಿನ ೫ ಜನರಿಗೆ	ಮುಂದಿನ ೫ ಜನರಿಗೆ	ಉಳಿದವರಿಗೆ
ರೂ. ೯೦೦	ರೂ. ೮೦೦	ರೂ. ೬೦೦

ಎರಡನೇ ಚೌಕಿನಲ್ಲಿಯ ಉತ್ತರ ಸರಿಯಾಗಿದ್ದವರಿಗೆ

ಮೊದಲಿನ ೫ ಜನರಿಗೆ	ಮುಂದಿನ ೫ ಜನರಿಗೆ	ಉಳಿದವರಿಗೆ
ರೂ. ೭೫	ರೂ. ೫೦	ರೂ. ೨೫

ಎಂಥ ಸಂದರ್ಭದಲ್ಲಿಯೂ ಇನಾಮಿನ ಹಣದಲ್ಲಿ ಕಡಿಮೆ ಮಾಡಲಾಗುವದಿಲ್ಲ. ಉತ್ತರ ಬೇಕಾದವರು ವಿಳಾಸವನ್ನು ಒರೆದು ಲಕ್ಕೋಟನ್ನು ಕಳಿಸಬೇಕು. ಮ್ಯಾನೇಜರರ ನಿರ್ಣಯವು ಕೊನೆಯದೂ, ಕಾಯಿದೆಯಿಂದ ಬಂಧನಕಾರಕವಾದದ್ದೂ ಇರುತ್ತದೆ.

ವಿಶೇಷ ಸೂಚನೆ—ವೃತ್ತಪತ್ರಿಕೆಗಳಲ್ಲಿ ಜಾಹೀರಾತು ಕೊಡಲಿಚ್ಛಿಸುವವರು, ಜಾಹೀರಾತು ಬೇಕಾದ ವೃತ್ತಪತ್ರಿಕೆಗಳೂ ನಮಗೆ ಬರೆಯಬೇಕು.

ಚಿನ್ನ, ಬೆಳ್ಳಿ, ಅರಳೆ, ಬಟ್ಟೆ ಮುಂತಾದವುಗಳು ತಯಾರಾದ ಇಲ್ಲವೆ ಕಳುಹಿಸುವ ವ್ಯಾಪಾರವನ್ನು ಹಿಂದೂಸ್ಥಾನದ ಅಥವಾ ಪರದೇಶಗಳ ಸಂಗಡ ಯೋಗ್ಯವಿಪಾಟಿಟ್ಟು ಇಟ್ಟುಕೊಂಡು ದಲಾಲಿ ಮೇಲೆ ಮಾಡಿಸಿ ಕೊಡುವೆವು.

Manager- Indo Foreign Commercial Service,
121 Kika Street, Bombay 4

ಸತ್ಯವಾದಿ

ವಾರಪತ್ರಿಕೆಯನ್ನು ಓದಿ ಆನಂದಿಸಿರಿ

ವಿವಿಧ ವಿಚಾರಗಳಿಂದ ವಿರಾಜಿಸುತ್ತದೆ.

ತಾಲ್ಲೂಕಿನ ಉನ್ನತಿಯುಕ್ತ ಮತ್ತು ದೇಶಹಿತದಾಯಕವಾದ
ಅನೇಕಾನೇಕ ವಿಷಯಗಳನ್ನೂ
ರಸವತ್ತಾದ ಕಥೆಗಳನ್ನೂ, ಹಾಸ್ಯಲಹರಿಯನ್ನೂ,
ದೇಶ ವಿದೇಶ ವರ್ತಮಾನಗಳನ್ನೂ ಒಳಗೊಂಡಿರುತ್ತದೆ.
ಸನಾತನಧರ್ಮವಿಚಾರಗಳು ಪ್ರಕಟಿಸಲ್ಪಡುವುವು.

ವಾರ್ಷಿಕ ಚಂದ

ಸ್ಥಳಕ್ಕೆ 1—0—0
ಆಂಚೆವೆಚ್ಚ ಸೇರಿ) ಪರಸ್ಥಳಕ್ಕೆ 1—10—0 **ಬಿಡಿ ಪ್ರತಿ ೩ ಪೈ**

ನಮ್ಮಲ್ಲಿ ಎಲ್ಲಾ ವಿಧವಾದ ಮುದ್ರಣ ಕೆಲಸಗಳೂ ಸುಲಭ ಛಾರ್ಜಿಗೆ ಸಕಾಲಕ್ಕೆ ಮಾಡಿಕೊಡಲ್ಪಡುತ್ತವೆ.

ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು.

ಶಕ್ತಿಸುಧಾ

ಬಾಲ್ಯದಲ್ಲಿ ಅವಿಚಾರದ ದೆಸೆಯಿಂದಲಾಗಲಿ, ಅತಿ ಸಂಭೋಗದಿಂದಾಗಲೀ ವೀರ್ಯವನ್ನು ಕಳೆದುಕೊಂಡು, ತೇಜೋಹೀನರೂ, ಬಲಹೀನರೂ ಆದವರಿಗೆ "**ಶಕ್ತಿಸುಧೆ**" ಯು ನವತೇಜಸ್ಸನ್ನೂ ಬಲತುಷ್ಟಿ ಪುಷ್ಟಿಯನ್ನೂ ಉಂಟುಮಾಡುತ್ತದೆ. ಇದು ಸಕಲ ವಿಧವಾದ ಧಾತುವಿಕಾರಗಳಿಗೆ ರಾಮಬಾಣವು

ಸಹಜವಾದ ಅಶಕ್ತತೆಯಿಂದಾಗಲೀ, ವಯೋಧರ್ಮದಿಂದಾಗಲೀ, ಇಂದ್ರಿಯ ದೌರ್ಬಲ್ಯವನ್ನು ಹೊಂದಿ, ಮನೋವ್ಯಥೆಯಿಂದ ಪೀಡಿತರಾದವರಿಗೆ "**ಶಕ್ತಿಸುಧೆ**" ಯು ನವಜೈತನ್ಯವನ್ನೇ ಉಂಟುಮಾಡಿ, ಉತ್ಸಾಹದಿಂದ ಸುಖವನ್ನು ಅನುಭವಿಸಿ ಆನಂದಪಡಲು ಸಹಾಯಮಾಡುತ್ತದೆ.

"**ಶಕ್ತಿಸುಧೆ**" ಯು ರಕ್ತವೃದ್ಧಿಯನ್ನೂ ಧಾತುಪುಷ್ಟಿಯನ್ನೂ ಉಂಟುಮಾಡುವುದು. ಪ್ರತಿಯೊಬ್ಬರೂ, ತಮ್ಮ ತಮ್ಮ ಕೆಲಸಗಳನ್ನು ಆದೆಯಾಸವಿಲ್ಲದೆ ಮಾಡುವಂತೆ ಉತ್ಸಾಹವನ್ನು ತಂದುಕೊಡುತ್ತದೆ.

ಸ್ತ್ರೀಯರು ಮುಟ್ಟಾಗ್ವ ಕಾಲದಲ್ಲಿ ಬರುವ ಸೊಂಟನೋವು, ಹೊಟ್ಟೆನೋವು, ಅಕ್ರಮಸೂತಕವನ್ನೂ, ನಿಶ್ಯಕ್ತಿಯನ್ನೂ ಗುಣಪಡಿಸಿ ಅವರ ಸಹಜವಾದ ಸೌಂದರ್ಯವನ್ನು ವೃದ್ಧಿಮಾಡುವುದು.

ವಿದ್ಯಾರ್ಥಿಗಳು ಪಾಠಗಳನ್ನು ಚೆನ್ನಾಗಿ ಕಲಿಯುವದಕ್ಕೂ, ಕಲಿತುದನ್ನು ಮರೆತುಹೋಗದಂತಹ ಒಳ್ಳೆಯ ಜ್ಞಾಪಕಶಕ್ತಿಯಿರುವಂತೆ ಮೆದುಳಿಗೆ ಶಕ್ತಿಯನ್ನು ಕೊಡುವುದಕ್ಕೂ "**ಶಕ್ತಿಸುಧೆ**" ಯು ವರಪ್ರಸಾದವು.

ಅಜೀರ್ಣ, ಅಗ್ನಿಮಾಂದ್ಯ ಮಲಬದ್ಧ ಇತ್ಯಾದಿ ಸಾಮಾನ್ಯ ಖಾಯಿಲೆಗಳು ಈ "**ಶಕ್ತಿಸುಧೆ**" ಯನ್ನು ಉಪಯೋಗಿಸುವವರಿಗೆ ಇರುವುದೇ ಇಲ್ಲ.

ಆರೋಗ್ಯವನ್ನು ಕಾಪಾಡಿ ಶಕ್ತಿಯನ್ನು ಹೆಚ್ಚಿಸುವದರಲ್ಲಿ ಅವೃತಪಾಯವಾದ "**ಶಕ್ತಿಸುಧೆ**" ಯನ್ನು ಸೇವಿಸಿ ಸರ್ವರೂ ಪ್ರಯೋಜನ ಹೊಂದಿರಿ.

ಬೆಲೆ ಒಂದು ರೂಪಾಯಿ. ವಿ. ಪಿ. ಬೇಕೆ. ಚಿಕ್ಕ ಡಬ್ಬಿ ೪ ಆಣೆ

ವಿಳಾಸ,— ಸತ್ಯವಾದಿ ಬಿಲ್ಡಿಂಗ್ಸ್, ಮೈಸೂರು

ಸತ್ಯವಾದಿ

ನಿರುದ್ಯೋಗ ಪರಿಹಾರ

ಸರ್ಕಾರದ ಕೆಲಸಗಳು ನಡೆಯುವದಕ್ಕೆ ಖರ್ಚು ಹೆಚ್ಚಾಗುತ್ತಾ ಹೆಚ್ಚಾಗುತ್ತಾ ಜನಗಳ ಮೇಲೆ ಭಾರವು ಹೆಚ್ಚುತ್ತಾ ಬರುತ್ತಿದೆ. ನಿರುದ್ಯೋಗ ವ್ಯಾಧಿಯು ದೇಶದಲ್ಲೆಲ್ಲಾ ಹರಡುತ್ತಿರುವಾಗ ತೆರಿಗೆಗಳ ಭಾರವು ಹೆಚ್ಚಾಗಿದ್ದಲ್ಲ ಜನಗಳ ಸ್ಥಿತಿಯು ಹೇಗಿರಬಹುದೋ ಯೋಚಿಸಬಹುದು. ಜನರು ಸುಖವಾಗಿರಬೇಕಾದರೆ, ಆದಷ್ಟೂ ಕಡಮೆ ತೆರಿಗೆಗಳು ಇರಬೇಕು. ಇದಕ್ಕೆ ಮಾಡಬೇಕಾದದ್ದು ಸರ್ಕಾರದ ಖರ್ಚನ್ನು ತಗ್ಗಿಸಬೇಕು. ೩೦ ರೂಪಾಯಿಗಳಿಗೆ ಕಡಮೆಯಿಲ್ಲದೆ ಸಾವಿರಕ್ಕೆ ವಿಾರದ ಸಂಬಳಗಳನ್ನು ವಿರ್ಾಡು ಮಾಡುವುದು ಯೋಗ್ಯವಾಗಿದೆ.

ನಿರುದ್ಯೋಗತೆಯೇ ಮೋಸ, ತಟಪಟ, ಹತ್ಯೆ ಮೊದಲಾದವುಗಳಿಗೆ ಮೂಲವು. ದೇಶವು ಕ್ಷೇಮವಾಗಿರುವ್ದು ಯಾರಿಗೂ ಹೊಟ್ಟಿಬಟ್ಟೆಗಳಿಗೆ ತಾಪತ್ರಯವಿಲ್ಲದಿರುವಾಗ. ಸರ್ಕಾರದ ಮುಖ್ಯೋದ್ದೇಶವು "ಸರ್ವೇಜನಾಃಸುಖಿನೋಭವಂತು" ಎಂಬುದೇ ಆದುದರಿಂದ, ಈ ಹಾಳು ನಿರುದ್ಯೋಗ ವ್ಯಾಧಿಯನ್ನು ದೇಶದಿಂದ ತೊಲಗಿಸಲು ಕ್ಷಿಪ್ರಮಾಡುವುದು ಆವಶ್ಯಕವು.

ಬೌದ್ಧ ರಾಜರು ೧೦೦ ವರ್ಷಗಳವರೆಗೂ ನ್ಲೆಗಡಿಯಂತಹ ಸಾಮಾನ್ಯ ವ್ಯಾಧಿಯೂ ತಮಗೆ ಇಲ್ಲದೆ ಜೀವಿಸಬಲ್ಲರೆಂದೂ, ೫೮ ವರ್ಷಗಳಿಂದ ಕಣ್ಣಿಗೆ ಕನ್ನಡಕಗಳಿಲ್ಲದೆ ಇರುವರೆಂದೂ, ಸೂರ್ಯ ನಮಸ್ಕಾರವನ್ನು ಮಾಡುವ ಫಲವೇ ಇದೆಂದೂ, ಇಂಗ್ಲೆಂಡಿನಲ್ಲಿ ಉಪನ್ಯಾಸಿಸುತ್ತಿರುವರು ಇವರು ವೃದ್ಧರಾದರೂ ಯುವಕರಂತೆ ಬಲಿಷ್ಠರಾಗಿರುವದನ್ನು ಕಂಡು ಎಲ್ಲರೂ ಆಶ್ಚರ್ಯಪಡುತ್ತಿರುವರು ಇಂಗ್ಲೆಂಡಿನಲ್ಲಿ ಅನೇಕರು ಇವರಲ್ಲಿ ಯೋಗಸಾಧನೆಯನ್ನು ಕಲಿಯುತ್ತಿರುವರು.

ಮುನಿಸಿಪಾಲಿಟಿ ದ್ವಿತೀಯ ಸಾಮಾವೇಶವು ಗೋರಖಪುರದಲ್ಲಿ ಡಿಶಂಬರ್ ೨೬, ೨೭, ೨೮ ನೇ ತಾರೀಖುಗಳಲ್ಲಿ ಈ ವರ್ಷ ನಡೆಯಲಿರುವದು. ಸದರಿ ಸಮಾವೇಶದ ಅಧ್ಯಕ್ಷರಾದ ಶ್ರೀಯುತ ವಾಸುದೇವನ ದಾಸರು ಈ ವಿಷಯವನ್ನು ನಮ್ಮ ವಾಚಕರಿಗೆ ತಿಳಿಸಲು ಪತ್ರ ಬರೆದಿರುವರು. — ನೆರೆಗಳ ಹಾವಳಿ ಒಂದೆಡೆ, ಸಕಾಲದಲ್ಲಿ ಮಳೆಬಾರದಿರುವದು ಒಂದು ಕಡೆ, ಕಳ್ಳಕಾಕರ ಬಾಧೆಯೊಂದುಕಡೆ, ನಿರುದ್ಯೋಗತೆನದ ಹಾಗೂ ಆರ್ಥಿಕ ದುರವಸ್ಥೆಯ ಕೋಲಾಹಲವು ಒಂದು ಕಡೆ, ಸಾಲದಕ್ಕೆ ವ್ಯಾಧಿಗಳ ಧಾಳಿಯೊಂದುಕಡೆ. ಈ ಒಗೆಯಲ್ಲಿ ಪ್ರಪಂಚದಲ್ಲಿ ಈಗ ಸುಖವೇ ಇಲ್ಲದಿರುತ್ತದೆ ಸಾಲದಕ್ಕೆ ಯುದ್ಧಗಳು ಅಲ್ಲಲ್ಲಿ, ತನ್ಮೂಲಕ ಜನಗಳ ಮಾನಸದಲ್ಲಿ ಸಮಾಧಾನವಿಲ್ಲದಿರುವಿಕೆ. ಈ ಎಲ್ಲ ಕಷ್ಟಗಳಿಂದ ಜನಗಳು ಎಂದು ಪಾರಾಗುವರೋ ಯಾರು ಹೇಳಬಲ್ಲರು!

ಪಾಶ್ಚಿಮಾತ್ಯ ದೇಶಗಳಲ್ಲಿ ಬಾಡಿಗೆಯ ಪದ್ಧತಿಯು ಬಹಳ ಹೆಚ್ಚು. ಮನೆಬಾಡಿಗೆ; ಮನೆಯಲ್ಲಿರುವ ಕುರ್ಚಿ, ಮೇಜು ಮುಂತಾದುವುಗಳು ಬಾಡಿಗೆಯವೆ. ಇಷ್ಟಲ್ಲದೆ ಇನ್ನೂ ಬೇಕಾದ ಸಾಮಾನುಗಳು ಬಾಡಿಗ್ಯೆ ದೊರೆಯುತ್ತವೆ. ಕೊನೆಗೆ ಮೈಮೇಲೆ ಜಂಭಕ್ಕೆ ಹಾಕಿಕೊಳ್ಳುವ ಬಟ್ಟೆಗಳೂ ಬಾಡಿಗೆಯವೆ! ಎಸ್ಕಟಿನಲ್ಲಿ ನಡೆಯುವ ಪ್ರೆಟಸ್ಟಿನ ಪ್ರಸಿದ್ಧವಾದ ಫೇಷನ್ (ಶೃಂಗಾರ) ಪೆರೇಡಿನಲ್ಲಿ ಸೇರುವ ಜನರಲ್ಲಿ ಮೂರನೇ ಒಂದು ಭಾಗ ಬಾಡಿಗೆಗೆ ತಂದ ಉಡುಪನ್ನು ಧರಿಸಿದ್ದರೆಂದು ಒಂದು ಆಂಗ್ಲೇಯ ಪತ್ರಿಕೆಯು ತಿಳಿಸುತ್ತದೆ. ಸಾಧಾರಣವಾಗಿ ಹೊದೆಯುವ ಉಡುಸೆಲ್ಲಾ ಬಾಡಿಗೆಗೆ ದೊರೆಯುತ್ತವೆ. ಈ ವ್ಯಾಪಾರ ಮಾಡುವ ಅಂಗಡಿಗಳೂ ದಿನೇ ದಿನೇ ಹೆಚ್ಚುತ್ತಿವೆ. ಒಂದು ಅಂಗಡಿಯು ಒಂದೇ ಸಲ ೪ ಸಾವಿರ ಜನರಿಗೆ ಬೆಳ್ಳಿಗಿರುವ ಉಡುಪನ್ನು ಕೊಡಲು ಸಿದ್ಧವಾಗಿದೆಯಂತೆ!

ಒಂದು ಲಂಡನ್ನಿನ ವಾರಪತ್ರಿಕೆಯ ಚಕ್ರವರ್ತಿ ಸಾರ್ವಭೌಮರು ಇಷ್ಟರಲ್ಲೇ ಒಂದು ಪಂಚಾಯಿತಿಗೆ ಮಾಡುವರೆಂದು ತಿಳಿಸುತ್ತದೆ. ಉತ್ತರ ಐರ್ಲೆಂಡಿಗೂ ಐರಿಷ್ ಫ್ರೀ ಸ್ಟೇಟಿಗೂ ಕಾರಣಾಂತರದಿಂದ ಜಾತಿಮಾತ್ಸರ್ಯದ ಜಗಳವು ನಡೆಯುತ್ತಲೇ ಇದೆ. ಈ ವಿಷಯದಲ್ಲಿ ಉತ್ತರ ಐರ್ಲೆಂಡಿಗೂ, ಐರಿಷ್ ಫ್ರೀ ಸ್ಟೇಟಿಗೂ, ಬ್ರಿಟನ್ನಿಗೂ ಸ್ನೇಹಭಾವವುಂಟಾಗುವಂತೆ ಪ್ರಯತ್ನಗಳನ್ನು ನಡೆಸಲು ಪ್ರಭುಗಳು ಒಂದು ಪಂಚಾಯಿತಿಗೆ ನಡೆಸಿದರು. ಈ ವಿಷಯಲ್ಲಿ ಚಕ್ರವರ್ತಿಯವನ್ನು ಏರ್ಪಾಡುಗಳನ್ನು ಸರಕಾರಕ್ಕೆ ಬಿಡದೆ ತಾವೇ ತಮ್ಮ ಇಷ್ಟಾನುಸಾರವಾಗಿ ಸ್ವಂತವಾಗಿ ನಡೆಸಿ ತಮ್ಮ ಅಧಿಕಾರವನ್ನೂ ಸ್ವಾತಂತ್ರ್ಯವನ್ನೂ ಪ್ರಕಟಿಸುವರು. ಚಕ್ರವರ್ತಿಯವರೂ ಪ್ರೆಸಿಡೆಂಟ್ ಡಿವೆಲರರೂ ಉತ್ತರ ಐರ್ಲೆಂಡ್ ಪ್ರಮುಖ ಮಂತ್ರಿಗಳಾದ ಲಾರ್ಡ್ ಕೈಗಾಪೆನ್‌ರೂ ಬಟ್ಟೆಗೆ ಕೆಲಸ ಯೋಚಿಸುವರು. ಈ ಪಂಚಾಯಿತಿಗೆಯಿಂದ ಒಳ್ಳೆಯ ಫಲವೇ ಕಾಣುವುದೆಂದೂ ಊಹಿಸಲಾಗಿದೆ. ಚಕ್ರವರ್ತಿ ಸಾರ್ವಭೌಮರು ತಮ್ಮ ದೇಶದಲ್ಲೂ ಪ್ರಜೆಗಳಲ್ಲೂ ಇಷ್ಟು ಪ್ರೀತಿಯನ್ನೂ ಕುತೂಹಲವನ್ನೂ ಕಾರ್ಯರೂಪದಲ್ಲಿ ತೋರಿಸುತ್ತಿರಲು ನಮ್ಮ ದೇಶೀಯ ರಾಜರು ತಮ್ಮ ಪ್ರಜೆಗಳನ್ನು ತಿರಸ್ಕರಿಸಲು ಕಾರಣವೇನಿರಬಹುದು? ಸಾರ್ವಭೌಮರು ಸರಕಾರದ ಅಧೀನರಾಗಿದ್ದರೂ ಈ ಮಹಾರಾಜರಿಗೆ ತಮ್ಮ ಪ್ರಜೆಗಳಲ್ಲಿ ಅದೇ ಪ್ರೀತಿಯನ್ನೂ ಕುತೂಹಲವನ್ನೂ ತೋರಿಸುವುದಕ್ಕೆ ಅಡ್ಡಿಯೇನಿದೆ?

ಔಷಧವಿಲ್ಲದೆ ಚಿಕಿತ್ಸೆ

ಈ ಕೆಳಗೆ ಕಂಡ ಮಹನೀಯರು ಮೈಸೂರು ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಶ್ರೀ ಸಿದ್ಧಾರೂಢಸ್ವಾಮಿಗಳ ಶಿಷ್ಯರಾದ ಶ್ರೀ ಚೈತನ್ಯಂ ಬಿ. ರಾಮದಾಸ್‌ರವರ ಹಸ್ತಸ್ಪರ್ಶದಿಂದಲೇ ತಮ್ಮ ಖಾಯಿಲೆಗಳು ಗುಣವಾದದನ್ನು ಅವರಿಗೆ ತಿಳಿಸಿರುವರು.

(1) ಸೀತಾವಿಳಾಸ ಅಗ್ರಹಾರದ 286 ನೇ ನಂಬರ್ ಮನೆಯಲ್ಲಿರುವ ಎಂ. ಕೃಷ್ಣಸ್ವಾಮಿಯವರಿಗೆ 4-5 ವರ್ಷಗಳಿಂದ ಇದ್ದ ನಿಶ್ಯಕ್ತಿ, ಹಲ್ಲಿನಲ್ಲಿ ರಕ್ತ ಬರುವುದು 7 ದಿನಗಳಲ್ಲಿ ಗುಣವಾದವು. (2) ಡಿ. ಸುಬ್ಬಯ್ಯನ ರಸ್ತೆ ನಾಗೋಜೀರಾಯರ ಮಗ ನಾಗೇಶರಾಯರಿಗೆ ಮಂಡಿ ಹಿಡಿದು ವ್ರಣವಾಗಿ ತೊಡೆ ನೀಡಲು ಸಹ ಆಗದೇ ಇದ್ದುದು ವಾಸಿಯಾಗಿದೆ. (3) ಹಳೇ ಅಗ್ರಹಾರದ ಈರಾಚಾರಿ ಮಗ ರಾಮಲಿಂಗೇಶ್ವರ ಎಂಬ ಮಗುವಿಗೆ 15 ದಿನಗಳಿಂದ ಬರುತ್ತಿದ್ದ ಎಳವು, ಜ್ವರವು 4--5 ದಿನಗಳಲ್ಲಿ ಗುಣವಾಗಿರುತ್ತದೆ.

ವಿವಿಧ ವಿಷಯಗಳು

ಇಂಡಿಯಾದಲ್ಲಿ ನಿರುದ್ಯೋಗಿಗಳ ಸಂಖ್ಯೆಯು ೯ ಕೋಟಿ ಎಂದು ತಿಳಿಯಬಂದಿದೆ.

ಕನ್ಯಾದ ರೈಲು ಸ್ಟೇಷನ್ನಿನಲ್ಲಿ ಆಗಿಂದಾಗ್ಗೆ ಜನಗಳಿಗೆ ಸಿಂಹಗಳಿಂದ ಬಾಧೆಯುಂಟಾಗುತ್ತಿದೆ. ಅಲ್ಲಿಯ ಭಾರತೀಯವನೇಕರು ಇವನ್ನು ಸಾಯಿಸುತ್ತಿರುವರು.

ಒರ್ಮಾದಲ್ಲಿ ಪ್ರವಾಹದ ಹಾವಳಿಯಿಂದ 5 ಸಾವಿರ ಎಕ್ರೆ ಭೂಮಿಯಲ್ಲಿದ್ದ ಭತ್ತದ ಪೈರು ನಾಶವಾಗಿದೆಯೆಂದು ತಿಳಿಯಬರುತ್ತದೆ.

ಹೆಂಡತಿಯನ್ನು ಅತ್ಯೆಮಾವಂದಿರು ಕಳಿಸದೆ ಹೋದುದರಿಂದ ಹೈದರಾಬಾದಿನ ಒಬ್ಬ ಅಗಸನಿಗೆ ಹುಚ್ಚು ಹಿಡಿದು ಆ ಹುಚ್ಚಿನಲ್ಲಿ ಅತ್ಯೆಮಾವಂದಿರನ್ನು ಹೊಡೆದು ಸಾಯಿಸಿದನು.

ಜಿನೀವಾ ನಾನಾ ಜಾತಿ ಸಮಿತಿಯಲ್ಲಿ ಸೇರಿ ಎಷ್ಟೋ ಹಣವನ್ನು ಚಂದಾರೂಪದಲ್ಲಿ ತೆರುವದಕ್ಕಿಂತ ಅದೇ ಹಣದಿಂದ ವಿಮಾನಗಳನ್ನು ಕೊಂಡರೆ ಎಲ್ಲಾ ಅನುಕೂಲಗಳೂ ಏರ್ಪಡುವವೆಂದು ಜರ್ಮನಿಯ ಮಂತ್ರಿಗಳಲ್ಲಿ ಒಬ್ಬರಾದ ಗೋಬಲ್ಸ್ ಎಂಬುವರು ಜರ್ಮನಿಯ ರಾಜಕೀಯವೇತ್ತರ ಸಭೆಯಲ್ಲಿ ತಿಳಿಸಿದರು.

ಇತರ ದೇಶಗಳಲ್ಲಿ ನಂಬಿಕೆಯನ್ನಿಟ್ಟು ಅಶ್ರದ್ಧೆಯಿಂದಿರುವದೇ ಹೊರತು, ಬ್ರಿಟೀಷು ಸಿಂಹವು ಹೋರಾಟಕ್ಕೆ ನಿಂತಲ್ಲಿ ಯಾರೂ ಇದನ್ನು ಎದುರಿಸಿ ನಿಲ್ಲಲು ಆಗದೆಂದು ಸರ್ ಎಡ್ವರ್ಡ್‌ರವರು ಹೇಳುತ್ತಿರುವರು. ಇಂಗ್ಲೆಂಡು ಕೂಡ ಈಜಿಗೆ ಪೂರ್ತಿಯಾಗಿ ಯುದ್ಧ ಸನ್ನಾಹವನ್ನು ಮಾಡುತ್ತಿದೆ.

ಯೂರೋಪಿನಲ್ಲಿ ಪ್ರವಾಸಮಾಡುತ್ತಿರುವ ನಮ್ಮ ಮಹಾರಾಜರಮರು ಬುಡಪೆಸ್ಟ್ ಮೃಗಶಾಲೆಯನ್ನು ಸಂದರ್ಶಿಸಿದಾಗ ನೂರಾರು ವಿದ್ಯಾರ್ಥಿಗಳು ಮಹಾರಾಜರನ್ನು ನೋಡಿ ಜಯಘೋಷ ಮಾಡಿದರು. ಮಹಾರಾಜರು ಮಗುಳ್ನಗೆಯಿಂದ ತಲೆಬಾಗಿಸಿದರಲ್ಲದೆ ಅಲ್ಲಿದ್ದ ಹಣ್ಣು ಫ್ಯಾಷಾರಿಯ ಹತ್ತಿರವಿದ್ದ ಹಣ್ಣುಗಳೆಲ್ಲಾ ಮಕ್ಕಳಿಗೆ ಕೊಡಿಸಿದರು.

ಮಧುರೆಯ ನಗರ ಸಭಾ ಕಮಿಷನರ ಸಂಬಳವನ್ನು ರೂ. 800 ರಿಂದ 1200 ರೂಪಾಯಿಗಳಿಗೆ ಹೆಚ್ಚಿಸುವ ಬಂದು ಮಸೂದೆ ಮದ್ರಾಸ್ ನ್ಯಾಯವಿಧಾಯಕ ಸಭೆಯ ಮುಂದೆ ಬಂದಿರುವುದು. ಇದು ನ್ಯಾಯವಲ್ಲವೆಂದೂ, ಈಗಿನ 800 ರೂಪಾಯಿಗಳೇ ಹೆಚ್ಚೆಂದೂ ಮಧುರೆಯ ನಗರ ಸಭೆಯವರು ಬಹುಮತದಿಂದ ನಿರ್ಧರಿಸಿ ತಮ್ಮ ನಿರ್ಧಾರವನ್ನು ನ್ಯಾಯವಿಧಾಯಕ ಸಭೆಯ ಸದಸ್ಯರುಗಳಿಗೂ ಮಂತ್ರಿಗಳಿಗೂ ತಿಳಿಸಿರುವರು.

ಸ್ಪೇನಿನಲ್ಲಿ ಸರಕಾರದವರಿಗೂ ದಂಗೆಗಾರರಿಗೂ ಪ್ರಚಂಡ ಹೋರಾಟವಾಗುತ್ತಿದೆಯಷ್ಟೆ. ಮೇಡ್ರಿಡ್ಡಿನಲ್ಲಿ ಆಹಾರ ಸಾಮಗ್ರಿಗಳು ಕಡಿಮೆಯಾಗುತ್ತಿವೆಯೆಂದು ತಿಳಿದುಬಂದಿದೆ. ಬೇರೆಬೇರೆ ಸರಕಾರಿಗಳ ರಾಯಭಾರಿಗಳು ಸ್ಪೇನಿನ ಜನರೊಳಗಿನ ಅಂತಃಕಲಹವನ್ನು ನಿಲ್ಲಿಸುವ, ಅದು ಅಸಾಧ್ಯವಾದಲ್ಲಿ, ಜಗಳದ ಕ್ರೌರ್ಯವನ್ನಾದರೂ ಕಡಿಮೆ ಮಾಡುವ ಪ್ರಯತ್ನದಲ್ಲಿರುವರು. ಜರ್ಮನಿ, ಇಟಲಿಗಳು ಫ್ರೆಂಚರ-ಹೇಳಿಕೆಯ ಮೇರೆಗೆ ಸ್ಪೇನಿನ ವಿಷಯದಲ್ಲಿ ತಾಟಸ್ಥ್ಯ ವಹಿಸುವುದಕ್ಕೆ ಸಮ್ಮತಿಯನ್ನು ಸೂಚಿಸಿವೆ.

ವಾರ್ತಾತರಂಗ

ಸೋಯಾಬೀನುಗಳು ದೇಹಕ್ಕೆ ಬಹಳ ಆರೋಗ್ಯಕರವಾದವುಗಳು. ಅವುಗಳಲ್ಲಿ ಎರಡು ಸಾವಿರ ಬಗೆಗಳ ಬೀಜಗಳಿರುತ್ತವೆ.

ಸಮುದ್ರ ಜಲದಲ್ಲಿ ಮ್ಯಾನ್ನೀಷಿಯಂ ಎಂಬ ಲೋಹವುಂಟು. ಅದನ್ನು ಈಗ ಹೇರಳವಾಗಿ ತೆಗೆಯುತ್ತಿರುವರು

ದೇಹಕ್ಕೆ ಸಿಟಕಿ ಕಣ್ಣು, ಇದರ ಪರೀಕ್ಷೆ ಯಿಂದ ಮನಸ್ಸಿನಲ್ಲಿಯ ವಿಷಯಗಳನ್ನೆಲ್ಲಾ ಅರಿಯಬಹುದಾಗಿದೆ.

ಸೌಂದರ್ಯವನ್ನು ಹೆಚ್ಚಿಸಲು ಅತ್ಯವಶ್ಯಕವಾದದ್ದು ಗಾಢನಿದ್ರೆ ಆಯಾಸವನ್ನು ಹೋಗಲಾಡಿಸುವ ನಿದ್ರೆ. ಮನಸ್ಸಿನಲ್ಲಿ ಚಿಂತೆಯಿಲ್ಲದಿರುವಿಕೆಯೂ ಇದಕ್ಕೆ ಸಹಾಯವನ್ನು ಮಾಡುತ್ತದೆ.

ನವಂಬರ್ ೨೦ ನೇ ತಾರೀಖು ಗ್ವಾಲಿಯರ್ ಮಹಾರಾಜರವರ ಪಟ್ಟಾಭಿಷೇಕವು ನಡೆಯುತ್ತದೆ, ಆ ಕಾಲಕ್ಕೆ ವೈಸರಾಯರವರು ಗ್ವಾಲಿಯರ್ ಸಂಸ್ಥಾನಕ್ಕೆ ಹೋಗುತ್ತಾರೆ.

ಪ್ರಭಾತ್ ಫಿಲಂ ಕಂಪೆನಿಯವರು ತಯಾರು ಮಾಡಿರುವ ಅವರಜೋತಿ ಎಂಬ ಸಿನಿಮಾ ಚಿತ್ರವನ್ನು ಅಂತರ್ರಾಷ್ಟ್ರೀಯ ಪ್ರದರ್ಶನಕ್ಕೆ ಇಂಡಿಯಾ ದೇಶದ ಪರವಾಗಿ ಕಳುಹಿಸಿರುವರು.

ಹಾಲಿನಲ್ಲಿ ಹಲ್ಲುಗಳನ್ನು ಬೆಳಿಸುವ ಶಕ್ತಿಯುಂಟು. ಶಾಕಾಹಾರಿಗಳಿಗೆ ಹೆಚ್ಚಾಗಿ ಯಾವಾಗಲೂ ಹಲ್ಲಿನ ವ್ಯಾಧಿಗಳು ಬರುವದಿಲ್ಲ. ಅಂಥವರಿಗೂ ಹಲ್ಲಿನ ವ್ಯಾಧಿಯು ಒಂದಿತೆಂದರೆ ಅವರ ಆಹಾರದಲ್ಲಿ ದೋಷವಿದೆ ಎಂದುಯತಕ್ಕದ್ದು.

ಬೆಲ್‌ಗ್ರೇಡಿನಿಂದ ಒಂದು ವಿಚಿತ್ರವಾದ ವರ್ತಮಾನ ಬಂದಿದೆ—ಅಲ್ಲಿಯ ಕೋರ್ಟಿನಲ್ಲಿ ಒಬ್ಬ ಹೆಂಗಸಿನ ವಿಚಾರಣೆಯಾಗುತ್ತಿತ್ತು. ಆ ಸಮಯದಲ್ಲಿಯೇ ಆಕೆಯು ಒಂದು ಮಗುವನ್ನು ಹೆತ್ತಳು. ಈ ಕಾರಣದಿಂದ ಅವಳು ನಿರ್ದೋಷಿಯೆಂದು ತೀರ್ಮಾನಿಸಲ್ಪಟ್ಟಳು.

ಶಾಸನ ಸಭೆಗಳಿಗೆ ಕಾಂಗ್ರೆಸ್ ಉಮೇದು ವಾರರನ್ನು ಹುನಾಯಿಸಬೇಕಾದ ಉದ್ದೇಶವೇನು? ಹೊಸ ಸುಧಾರಣೆಗಳ ಪ್ರಕಾರವೇ ಸುಧಾರಣೆಗಳನ್ನು ಪ್ರತಿಭಟಿಸಿ ನಿರಾಕರಿಸುವದಕ್ಕಾಗಿಯೇ ಹೊರತು ಬೇರೆ ಯಾವುದಕ್ಕೂ ಅಲ್ಲ ಎಂಬುದಾಗಿ ಕಾಂಗ್ರೆಸಿನ ಸಭೆಯವರು ಚುನಾವಣೆ ಪ್ರಕಟಣೆಯಲ್ಲಿ ಪ್ರಸಿದ್ಧ ಮಾಡಿರುವರು.

ಅಂವಿಾದಫೋಪ್ ಯೋಗಿಗಳು ಪಾಂಡಿಚೇರಿಯಲ್ಲಿರುವರಷ್ಟೆ. ವರ್ಷಕ್ಕೆ ಎರಡು ಮೂರು ದಿವಸಗಳು ಮಾತ್ರ ಅವರು ಒಹಿಪ್ರಪಂಚಕ್ಕೆ ಕಾಣಿಸಿಕೊಳ್ಳುವುದು ಈ ತಿಂಗಳು ೧೫ ನೇ ತಾರೀಖಿನ ದಿನ ಅವರ ೬೫ ನೇ ಜನ್ಮದಿನವಾದ್ದರಿಂದ ಜನರಿಗೆ ದರ್ಶನವಿತ್ತರು. ಅವರ ದರ್ಶನಾಪೇಕ್ಷೆಯಿಂದ ಪ್ರಪಂಚದ ನಾನಾ ದೇಶಗಳಿಂದ ೬೦೦ ಜನರು ಬಂದು ಕಾದಿದ್ದು ಅವರ ದರ್ಶನಾಶೀರ್ವಾದವನ್ನು ಪಡೆದರು. ಅವರು ಈಗ ೧೦ ವರ್ಷಗಳಿಂದಲೂ ಅಖಂಡವಾಗಿ ಮೌನವ್ರತವನ್ನು ಅವಲಂಬಿಸಿದ್ದಾರೆ.

ಈ ಸಂವತ್ಸರದಲ್ಲಿ ಒರಗಾಲದ ಭೀತಿಯಿಲ್ಲವೆಂದು ಶ್ರೀ ಸಿದ್ಧಾಂತಿ ರುದ್ರಾರಾಧ್ಯ ಶಾಸ್ತ್ರಿಗಳು ಅಭಿಪ್ರಾಯಪಟ್ಟಿರುವರು.

ಭೂಪಾಲಿನ ದಿಗಂಬರ ಪಂಗಡದ ಜೈನರಲ್ಲಿ ಸ್ವಲ್ಪ ಅಸಮಾಧಾನ ಉಂಟಾಗಿದೆ. ಕಾರಣ—ಅವರ ಸಾಧುಗಳು ನಿರ್ವಾಣಂತಾಗಿ ಸುತ್ತಾಡಬಾರದೆಂದು ಸರ್ಕಾರದ ಆಜ್ಞೆ! ದೇಶದಲ್ಲೆಲ್ಲಾ ಅನೇಕ ಪರೇಡುಗಳು ನಡೆಸಲ್ಪಟ್ಟು ಸರಕಾರದ ಈ ಹುಕುಂ ನಿಷೇಧಿಸಿದ್ದಾರೆ.

ಪೋಲೆಂಡಿನವರಿಗೂ ಒಬ್ಬ ನಿಯವರಂತೆ ತಮ್ಮ ರಾಜ್ಯವನ್ನು ಹೆಚ್ಚಿಸುವ ಆಸೆಕತ್ತಿದೆ. ಅಫ್ಘಿಕಾದ ಮೇಲೆ ಅವರ ಕಣ್ಣು.

ಜರೂಸಿಲಂನಲ್ಲಿ ವಾಸಮಾಡಲು ಹೋಗಿದ್ದ ಅಬ್ಸೀನಿಯಾ ಚಕ್ರವರ್ತಿನಿಯವರು ಅಲ್ಲೇ ಖಾಯಂ ಆಗಿ ವಾಸವಾಡಲು ಇಷ್ಟಪಡುವುದಿಲ್ಲವೆಂದೂ, ಕ್ಷಿಪ್ರದಲ್ಲೇ ಇತರ ರಾಜಮನೆತನದವರೊಡನೆ ಲಂಡನ್ನಿಗೆ ಹೋಗಿ ತನ್ನ ಪತಿಯೊಡನೆ ಸೇರುವರೆಂದೂ ವರ್ತಮಾನ ಬಂದಿದೆ.

ಬ್ರಿಟನ್ನಿನ ವಿಮಾನ ಸೈನ್ಯಕ್ಕೆ ಸ್ತ್ರೀಯರನ್ನು ಸೇರಿಸುವುದಿಲ್ಲವೆಂಬುದಾಗಿ ನಿರ್ಧರಿಸಿರುವರು

ಅನಾಹುತಗಳಿಂದ ಅಕಸ್ಮಿಕವಾಗಿ ಸತ್ತವರ ಶರೀರದಿಂದ ರಕ್ತವನ್ನು ತೆಗೆದುಕೊಂಡು ಅದನ್ನು ಸರಿಯಾದ ರೀತಿಯಲ್ಲಿಟ್ಟಿದ್ದು ಅಶಕ್ತರಿಗೆ ಪ್ರಯೋಗಿಸುವುದಕ್ಕಾಗಿ ರಷ್ಯಾದೇಶದ ಡಾಕ್ಟರರು ಸತ್ತವರ ಶರೀರಗಳಿಂದ ರಕ್ತವನ್ನು ಶೇಖರಮಾಡಲು ಸೂಚನ ಪ್ರಯತ್ನಗಳನ್ನು ಮಾಡಿ ಯಶಸ್ವಿಯಾಗಿದ್ದಾರೆ.

ಕೊಲನಾರ್ಟಿ ಎಂಬ ಗ್ರಾಮದಲ್ಲಿ ಒಂದು ಆಶ್ಚರ್ಯಕರವಾದ ವಿಷಯವು ನಡೆದಿರುತ್ತದೆ. ಅಲ್ಲಿ ಒಬ್ಬ ಹೆಂಗಸು ಗರ್ಭಿಣಿಯಾಗಿ ೧೦ ನೆಯ ತಿಂಗಳಲ್ಲಿ ಭುಜಕ್ಕೂ ಸಡುವಿಗೂ ಇರುವ ಸ್ಥಾನದ ಪ್ರದೇಶದಿಂದ ಗಂಡು ಮೊಗವೊಂದನ್ನು ಹೆತ್ತಿರುವಳು. ಮಗವೂ ಬಾಣಂತಿಯೂ ಕ್ಷೇಮವಾಗಿರುವರು. ಹೆರಿಗೆಯು ಕರುವಾಯ ಡಾಕ್ಟರುಗಳು ಆ ದ್ವಾರವನ್ನು ಹೊಲಿದಿರುವರು.

ಹಾಲೆಂಡಿನಲ್ಲಿ ಜನಸಂಖ್ಯೆಯಷ್ಟೇ ಹಸುಗಳಿವೆ. ಇಂಡಿಯಾದಲ್ಲಿಯಾದರೋ ಜನಸಂಖ್ಯೆಯ ಹದಿನಾಲ್ಕನೇ ಒಂದು ಭಾಗದಷ್ಟು ಹಸುಗಳು ಮಾತ್ರ ವಿರುತ್ತವೆ

—ಒಂದು ತೊಟ್ಟು ನೀರು ಕೂಡ ಕುಡಿಯದೆ ಮನುಷ್ಯನು ೪ ತಿಂಗಳುಗಳಿಗಿಂತ ಹೆಚ್ಚಾಗಿ ಜೀವಿಸಬಲ್ಲನಂತೆ! ಜೈನಮುನಿಯವರು ಉಪವಾಸ ಮಾಡುತ್ತಿರುವುದೇ ಇದಕ್ಕೆ ನಿದರ್ಶನ.

ಹೆಚ್ಚು ಲಾಭವು ಈಗಿನ ಕಾಲದಲ್ಲಿ ಬರುವದು ಹೋಟಲುಗಳಲ್ಲಿ ಮತ್ತು ಫಿಲಂ ಕಂಪೆನಿಗಳಲ್ಲಿ. ಕಳೆದ ವರ್ಷ ೬೫೦ ಮಿಲಿಯ ರೂಪಾಯಿಗಳ ಮೂಲಧನಕ್ಕೆ ಫಿಲಂ ಕಂಪೆನಿಗಳಲ್ಲಿ ಬಂದಿರುವ ಲಾಭವು ೩೪೦೦ ಮಿಲಿಯ ರೂಪಾಯಿಗಳು. ಅಂದರೆ ಶೇಖಡಾ ೫೦ ಕ್ಕೆ ಮಿಂಚಿದ ಲಾಭವು.

ಹಾಲಿವುಡ್ಡಿನಲ್ಲಿಯ ನಟಿಯಮ್ಮಲ್ಲಿ ಮೆಯಿವೆಸ್ಟ್ ಎಂಬ ಹೆಂಗಸಿಗೆ ತಿಂಗಳಿಗೆ ೬೦ ಸಾವಿರ ಪೌಂಡು ಸಂಬಳವೂ ಕಂಪೆನಿಯ ಲಾಭದಲ್ಲಿ ಸ್ವಲ್ಪ ಭಾಗವೂ ಲಭಿಸುತ್ತಿದೆ.

ಡಾಕ್ಟರ್ ಮುಂಜೆಯವರು ಸ್ಥಾಪಿಸಿರುವ ಭೌಕ್ಲಿ ಮಿಲಿಟರಿ ಶಾಲೆಯನ್ನು ಕಟ್ಟುವುದಕ್ಕೋಸ್ಕರ ನಾಸಿಕ ನಗರದ ಸಮೀಪದಲ್ಲಿ ೧೫೦ ಎಕರೆ ಜಮೀನನ್ನು ತೆಗೆದುಕೊಂಡು ಕಟ್ಟಡವು ಕಟ್ಟಬೇಕೆಂದು ತೀರ್ಮಾನಿಸಿದ್ದಾರೆ. ಇದಕ್ಕಾಗಿ ಈಗಾಗಲೇ ೨ ಲಕ್ಷ ೨೫ ಸಾವಿರ ರೂಪಾಯಿಗಳನ್ನು ಶೇಖರಮಾಡಿದ್ದಾರೆ.

ಕಳೆದ ಶ್ರಾವಣ ಬ॥ ೧೪ ನೇ ಶನಿವಾರ ದಿವಸ ಆದವಾನಿಗೆ ಸಮೀಪದಲ್ಲಿರುವ ದೊಡ್ಡ ಬೆಟ್ಟದ ಶಿಖರದಲ್ಲಿರುವ ಆಂಜನೇಯ ಸ್ವಾಮಿಯವರಿಗೆ ಆ ಸ್ಥಳದ ಜನರು ಸೇರಿ ಮಹಾಭಿಷೇಕವನ್ನು ಮಾಡಿಸಿದರು. ಬಹಳ ದಿವಸಗಳಿಂದಲೂ ಮಳೆಯಿಲ್ಲದೆ ಕುಡಿಯಲು ನೀರಿಲ್ಲದೆ ಶ್ರಮವಾಗಿದ್ದುದರ ಪರಿಹಾರಕ್ಕಾಗಿ ಹೀಗೆ ಮಾಡಿದರು. ಆಂಜನೇಯ ಸ್ವಾಮಿಯವರ ಅನುಗ್ರಹದಿಂದ ಮೂರನೆ ದಿನದಿಂದಲೇ ವಿಶೇಷವಾಗಿ ಮಳೆಯಾಗುತ್ತಿದೆ.

ಇಂಗ್ಲೆಂಡಿನ ಪ್ಲಿಮೆತ್ ಪಟ್ಟಣದ ಸಮೀಪದ ಹಳ್ಳಿಯಲ್ಲಿ ಇಬ್ಬರು ಬಾಲಿಕೆಯರು ಚಿಕ್ಕಂದಿನಿಂದ ಒಟ್ಟಿಗೇ ಬೆಳೆಯುತ್ತಿದ್ದರು. ಮೇರಿ ಎಂಬುವಳು ಅವರಲ್ಲಿ ಸ್ವಲ್ಪ ಗಂಡುಭೀರಿಯಂತೆ ನಟಿಸುತ್ತಲೂ ವರ್ತಿಸುತ್ತಿದ್ದಳು. ಸ್ವಲ್ಪ ಕಾಲಾನಂತರ ಅವಳಿಗೆ ಪುರುಷನ ಚಿಹ್ನೆಗಳು ಕಾಣಿಸಿಕೊಂಡವು. ಡಾಕ್ಟರರು ಶಸ್ತ್ರಚಿಕಿತ್ಸೆಯನ್ನು ನಡೆಸಿದನಂತರ ಈಗ ಸಂಪೂರ್ಣ ಗಂಡಸಾಗಿರುವಳು ಬಾಲ್ಯ ಸ್ನೇಹವು ಅವರಲ್ಲಿ ಈಗ ಪ್ರಣಯವಾಗಿ ಪರಿಣಮಿಸಿ ಈಗ ಅವರಿಬ್ಬರೂ ಮದುವೆ ಮಾಡಿಕೊಂಡು ಸಂತೋಷದಿಂದ ಇದ್ದಾರೆ.

ಸಯಾಲ್ ಕೋಟೆಯಲ್ಲಿ ಒಬ್ಬ ರೈಲ್ವೆ ಪ್ರಯಾಣಿಕನ ಜೇಬಿನಿಂದ ಹತ್ತು ರೂಪಾಯಿ ಕದ್ದದ್ದಕ್ಕಾಗಿ ಒಬ್ಬ ರೈಲ್ವೆ ಪಿಕ್‌ವಾಟ್ಸಿಗೆ ೩ ವರ್ಷಗಳ ಕಠಿಣ ಶಿಕ್ಷೆ ವಿಧಿಸಿ ವರ್ಷಕಳ ಕಾಲ ತನ್ನ ಗ್ರಾಮದಲ್ಲೇ ಇರಬೇಕೆಂಬ ನಿರ್ಬಂಧವೂ ಮಾಡಲ್ಪಟ್ಟಿದೆ.

ಅಬ್ಸೀನಿಯಾ ಚಕ್ರವರ್ತಿಯಾದ ನಗಸ್‌ರವರು ಲಂಡನ್ನಿನ ಓಕಿಂಗ್ ಮಸೀದಿಗೆ ಬೇಟಿಯಿತ್ತು, ಅಲ್ಲಿ ಒಂದು ಸ್ವಾರಸ್ಯವಾದ ಭಾಷಣವನ್ನು ಮಾಡಿದರು: ತಮಗೆ ಅರ್ಪಿಸಿದ ಬಿನ್ನವತ್ತಳೆಗೆ ಉತ್ತರವೀಯುತ್ತಾ ಇವರ ಇಸ್ಲಾಂ ವಿಶಾನುಯಾಯಿಗಳಿಗೆ ಸಹಾಯ ಪ್ರಯತ್ನಗಳನ್ನು ಹೊಗಳಿದರು. ಮಸೀದಿಯ ಇಮಾಂರವರು ಚಕ್ರವರ್ತಿಯವರಿಗೆ ಕೊರಾನಿನ ಪ್ರತಿಯೊಂದನ್ನೂ, ಪೈಗಂಬರರ ಚರಿತ್ರೆಯ ಪ್ರತಿಯೊಂದನ್ನೂ ಕೊಟ್ಟರು.

ಅಬ್ಸೀನಿಯಾದ ಗೋರಿಲ್ಲಾ ಕದನವನ್ನು ಕೊನೆಗೊಳಿಸುವುದು ಹೇಗೆ? ಅಲ್ಲಿ ಅವರನ್ನು ಆಳತಕ್ಕ ಯೋಗ್ಯರು ಯಾರು? ಫ್ರಾನ್ಸಿನ ಎರಡು ಪಾಲಿರುವ, ಆದರೆ ರಸ್ತೆಗಳಿಲ್ಲದ ಆ ದೇಶವನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಹೇಗೆ? ಮೇಲಾಗಿ ಯುದ್ಧ ಕಾಲದಂತೆ, ಯಾವಾಗಲೂ ೨ ಲಕ್ಷ ಇಟಲಿ ಸೈನಿಕರನ್ನು ಅಲ್ಲಿ ಇಟ್ಟುಕೊಳ್ಳಲು ಹಣವೆಲ್ಲಿಂದ ಎಂಬ ಚಿಂತೆಯು ಈಗ ರೋಮಿನ ತಲೆಗೆ ಸುತ್ತಿಕೊಂಡಿದೆ.

ಕಛೇರಿಯಲ್ಲಿ ಹಗಲೆಲ್ಲ ದುಡಿದ ಬಳಿಕವಾಗಲಿ,

ದಿನಚರಿಯ ವ್ಯಾಯಾಮಗಳು ಪೂರೈಸಿದನಂತರವಾಗಲಿ,

ಆಫೀಸು ಧೂಳು ಮತ್ತು ಬಿಸಿಲಿನಲ್ಲಿ ವ್ಯಾಪಾರಗಳನ್ನು ಮುಗಿಸಿದಮೇಲಾಗಲಿ

ದಣಿದ ದೇಹವನ್ನು

ಯಥಾಸ್ಥಿತಿಗೆ ತರಲು

ಮೈಸೂರು ಗಂಧದ ಸಾಬೂನಿನ

ಶಕ್ತಿವರ್ಧಕ ಸ್ನಾನಕ್ಕೆ

— ಸರಿಸಮವಾದುದು ಮತ್ತಾವುದೂ ಇಲ್ಲ —

ಮತ್ತು, ಇದು ಅತ್ಯಲ್ಪ ಬೆಲೆಯುಳ್ಳದ್ದಾಗಿದೆ.

Shiromani NARAYANACHARYA
Chowkambha, Benarese.

S.U.N. & CO.
BENARES CITY.

ಶಾಸ್ತ್ರಿಗಳೇ ! ಪೂರ್ವಕರು ಆರೋಗ್ಯವೇ ಐಶ್ವರ್ಯವೇ ಎಂದು ಕೇಳಿದ್ದಕ್ಕೆ ರಾಮಣ್ಣಯ್ಯನವರೇ ಪೂರ್ವಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು ? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತಿದ್ದರು. ಅದರಿಂದ ಏನುಫಲ ? ಅದನ್ನು ಧರಿಸಿದರೆ, ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ, ಸಂಪತ್ತು, ಕೀರ್ತಿ, ಇಂಪಗಳೆಲ್ಲಾ ಆಗುವುವು. ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವದು ? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಭಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ರುದ್ರಾಕ್ಷೀ ದೊರೆಯುವುದು.

ಸುಲ್ಲ ಆಡ್ಡೆಕ್ಕ ಪ್ರಮಾಣದ ೫೧ ಮುಖದ ಕಂಠಿಸರ 1 ಕ್ಕೆ ಆಣೆ 3 ರಿಂದ ರೂ 25 ರವರೆಗೆ ; 100 ರುದ್ರಾಕ್ಷಿಗಳುಳ್ಳ ಸರ 1 ಕ್ಕೆ ಆಣೆ 3 ರಿಂದ ರೂ. 25 ರವರೆಗೆ ; ಗೌರೀಶಂಕರ ರುದ್ರಾಕ್ಷಿ 1 ಕ್ಕೆ ರೂ 3 ರಿಂದ 50 ರವರೆಗೆ ; ಮತ್ತು 3--4--6--7--8 ಮುಖಗಳ ಕಾಳು ಆಣೆ 4 ರಿಂದ ರೂ 10 ರವರೆಗೆ ; 9--10--11 ಮುಖಗಳುಳ್ಳ ಕಾಳು 1 ಕ್ಕೆ ರೂ 2 ರಿಂದ 30 ರವರೆಗೆ ; 12--13--14 ಮುಖದ ಕಾಳು 1 ಕ್ಕೆ ರೂ 5 ರಿಂದ 100 ರವರೆಗೆ. ಸಣ್ಣ ರುದ್ರಾಕ್ಷೀ ಅವರೇ ಕಾಳಿಗಿಂತ ಸಣ್ಣದಾಗುತ್ತಾ ಕ್ರಯ ಜಾಸ್ತಿ ; ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತಾ ಕ್ರಯ ಜಾಸ್ತಿ ಆಗುವುದು. [ವಿವರಕ್ಕೆ ಕಟೆಲಾಗಿಗೆ ಬರೆದಲ್ಲಿ ಇನಾಮಾಗಿ ಕಳುಹಿಸುತ್ತೇವೆ 1 ಆಣೆ ಸ್ಟ್ಯಾಂಪು ಕಳುಹಿಸಿದಲ್ಲಿ 3 ಇನಾಮುಗಳು : 1 ವಿಶ್ವೇಶ್ವರಿ ಪಟ, 1 ಕಾಶೀನಕ್ಷೆ, 1 ಕ್ಯಾಟಲಾಗಿನೊಡನೆ 3 ಇನಾಮುಗಳು-

ವಿಳಾಸ:— ಶಿರೋಮಣಿ ನಾರಾಯಣಾಚಾರ್ಯ,
ಚೌಖಾಂಬಾ, ಕಾಶಿ.

ಸತ್ತಿರುವ ನಿಮ್ಮ ಪ್ರಿಯಬಂಧುಗಳನ್ನು ಮರೆತಿರುವಿರಾ !

ಮರಣ ಹೊಂದಿರುವ ನಿಮ್ಮ ಆಪ್ತ ಬಂಧುಗಳು, ನಿಮ್ಮೊಡನೆ ಪುನಃ ಸಂಭಾಷಿಸಲು ಕಾತರರಾಗಿರುತ್ತಾರೆಂದೂ, ನಿಮ್ಮ ಉದಾಸೀನತೆಯು ಅವರನ್ನು ಬಹಳವಾಗಿ ವ್ಯಸನಪಡಿಸುವುದೆಂದೂ ಜೀವಶಾಸ್ತ್ರಜ್ಞರು ಕಂಡು ಹಿಡಿದಿದ್ದಾರೆ ! ಸತ್ತವರು ಎಲ್ಲೋ ಸ್ವರ್ಗಕ್ಕೋ ಇನ್ನೆಲ್ಲಿಗೋ ಹೋಗುತ್ತಾರೆಂದು ಸುಮ್ಮನೆ ಇದ್ದು ಬಿಟ್ಟರೆ, ಅವರಿಗೆ ಮಹಾವ್ಯಸನವನ್ನುಂಟು ಮಾಡಿತ್ತೇವೆ. ನಾವೆಷ್ಟು ಪ್ರೀತಿಯುಳ್ಳವರಾಗಿರುತ್ತೇವೆಯೋ, ಸತ್ತವರೂ ಕೂಡ ಅಷ್ಟೇ ಪ್ರೀತಿಯುಳ್ಳವರಾಗಿರುತ್ತಾರೆ ಬೇಕಾದರೆ ನೀವು

ಜೀವಶಾಸ್ತ್ರ ತತ್ವಸಾರ "

ಅಥವಾ

ಸತ್ತವರೆಲ್ಲಿ ?

ಎಂಬ ಪುಸ್ತಕವನ್ನು ತರಿಸಿ ಈ ವಿಚಾರವನ್ನು ತಿಳಿಯಿರಿ. ಈ ಪುಸ್ತಕದಲ್ಲಿ ವಿವರಿಸಿರುವ ಸಂಭಾಷಣಾ ಮಾರ್ಗಗಳನ್ನು ಅನುಸರಿಸಿ, ನಿಮ್ಮ ಸತ್ತಿರುವ ಬಂಧುಗಳೊಡನೆ ಮಾತನಾಡಿ ! ಇದರ ಮಾಹಿತಿಯು ಈ ಪತ್ರಿಕೆಯಲ್ಲಿಯೇ ಪ್ರಕಟಮಾಡಿರುತ್ತೆ.

ನಿಮಗೆ ಅದೃಷ್ಟವನ್ನು ತಿಳಿಮಾಡಿಕೊಳ್ಳಬೇಕೆಂಬ ಅಪೇಕ್ಷೆಯಿದ್ದರೆ ಕೆಳಗಿನ ವಿಳಾಸಕ್ಕೆ ಬರೆಯಿರಿ. ಅವರು ಹೇಳುವ ಫಲವನ್ನು ಕೇಳಿ ಅನೇಕರು ಮುಗ್ಧರಾಗಿ ಹೋಗಿದ್ದಾರೆ. ತೃಪ್ತಿಕರವಾಗಿ ಹೇಳುತ್ತಾರೆ.

ವಿಳಾಸ :— **ತಾಜಿಕ ಜ್ಯೋತಿಷ್ಯರು,**
೧೦೬೮, ಚಾಮರಾಜ ಅಗ್ರಹಾರ, ಮೈಸೂರು.

Sadhana Aushadalaya
Dacca (Bengal)

ಸಾಧನ
ಔಷಧಾಲಯ, ಢಕ್ಕ

ಅಧ್ಯಕ್ಷರು--ಹಾಗಲ್ಪುರದ ಮಾಜಿ ರಸಾಯನ ಶಾಸ್ತ್ರ ಪಂಡಿತರಾಗಿದ್ದ ಮ॥ ಜೋಗೀಷಚಂದ್ರ ಘೋಸು ಎಂ. ಎ. ಎಫ್. ಸಿ. ಎಸ್. ಲಂಡನ್.

ಆಯುರ್ವೇದ ಶಾಸ್ತ್ರಕ್ಕೆ ಅನುಸಾರವಾಗಿ ಔಷಧಗಳು ತಯಾರಿಸಲ್ಪಡುತ್ತವೆ. ಕ್ಯಾಟಲಾಗು ಉಚಿತವಾಗಿ ಕಳುಹಿಸಲ್ಪಡುತ್ತೆ. ರೋಗ ವಿವರವನ್ನು ತಿಳಿಸಿದರೆ ಫೀಜಿಲ್ಲದೆ ಸಲಹೆ ಕೊಡಲ್ಪಡುತ್ತೆ.

ಮಕರಧ್ವಜ—ಸಕಲ ರೋಗಗಳನ್ನೂ ನಿವಾರಿಸುತ್ತದೆ. ಸುವರ್ಣ ಮಿಶ್ರವಾದದ್ದು. ವಾತ, ಪಿತ್ತ, ಕಫವನ್ನು ಸಮಪಡಿಸಿ, ದೇಹಕ್ಕೆ ಶಕ್ತಿಯನ್ನೂ, ಆರೋಗ್ಯವನ್ನೂ ಉಂಟುಮಾಡುತ್ತದೆ. ಬೆಲೆ ತೊಲಾ ೪ ರೂಪಾಯಿ.

ಸರೀಬಾದಿಸರ್ಪ—ಪ್ರಮೇಹ, ಸವಾಯಿ ರೋಗಿಗಳಿಗೆ ಅಮೋಘ ಔಷಧವಾದ ರಸ ವಿಷಪನ್ನು ಪರಿಹರಿಸುತ್ತದೆ. ಎಲ್ಲಾ ಮೂತ್ರ ರೋಗಗಳನ್ನೂ ನಿವಾರಿಸುತ್ತದೆ, ರಕ್ತವನ್ನು ಶುದ್ಧಪಡಿಸುತ್ತದೆ. ಬೆಲೆ ಸೇರು ೩ ರೂಪಾಯಿ.

ಶುಕ್ರಸಂಜೀವಿನಿ—ನಪುಂಸಕತ್ವ, ಧಾತುಕ್ಷೀಣತೆ ಮುಂತಾದ ಧಾತ ವಿಕಾರ ರೋಗಗಳನ್ನೂ ಗುಣಪಡಿಸುವ ಶಕ್ತಿವರ್ಧಕ ಔಷಧ ಬೆಲೆ ಸೇರು ೧೫ ರೂಪಾಯಿ.

ಅಬಾಲಾಂಧವಯೋಗ—ನಡುನೋವು, ಮುಟ್ಟುದೋಷ, ಒಂಜೆತನ ಮೊದಲಾದ ಸ್ತ್ರೀಯರ ಎಲ್ಲಾ ಖಾಯಿಲೆಗೂ ದಿವ್ಯೌಷಧ. ಬೆಲೆ ೧೬ ಹೊತ್ತಿಗೆ ೨ ರೂಪಾಯಿ ಮುತಶಿಂಹೆತ್ತಿಗೆ ೫ ರೂ.

ಅರುಣೋದಯದ

ವಿಜಯನಗರಸಾಮ್ರಾಜ್ಯ ಸಂಚಿಕೆಯು

ಅಖಿಲ ಕರ್ನಾಟಕದೊಳಗಿನ ವಿಖ್ಯಾತ ಸಾಹಿತಿಗಳಿಂದ ಒರೆಯಲ್ಪಟ್ಟ ವಿದ್ವತ್ಪ್ರಚುರವಾದ ಲೇಖನಗಳಿಂದ ಕೂಡಿದ ಮತ್ತು ವಿವಿಧ ವಿಜಯನಗರ ಸಾಮ್ರಾಜ್ಯದ ವೈಭವವನ್ನು ವ್ಯಕ್ತಪಡಿಸುವ ಅನೇಕ ಅಂದವಾದ ಚಿತ್ರಗಳನ್ನೊಳಗೊಂಡ, ಬರಹಗಾರರ ಅಲ್ಪ ಸಹಿಚಯ ಹಾಗು ಭಾವ ಚಿತ್ರಗಳಿಂದಲೂ ಶೋಭಿಸುವ ಅತ್ಯಂತ ಮಹತ್ವಪೂರ್ಣವಾದ ಹಾಗೂ ಕನ್ನಡಿಗರಿಗೆ ಅತ್ಯಂತ ಅಭಿಮಾನದ ವಿಷಯವಾಗಿರುವ ಜಯಕರ್ನಾಟಕದ ಆಕಾರದ ೨೫೦—೩೫೦ ಪುಟಗಳನ್ನು ಮಿಕ್ಕಿ ಹೊರಡುತ್ತಿರುವ ಹೆಬ್ಬೊತ್ತಿಗೆಯ ಬೆಲೆಯು ಕೇವಲ ೨ ರೂಪಾಯಿ ಮ್ಯಾನೇಜರ,

ಅರುಣೋದಯ, ಬೆಳಗಾವಿ.

Oriental Pharmacy

General Hospital Road MYSORE

for Best Unani Medicines